ಸಂಪುಟ 01 । ಸಂಚಿಕೆ 187 ಸೋಮವಾರ 28 ಸೆಪ್ಟೆಂಬರ್ 2026 । ಪುಟ 4 । ಬೆಲೆ–2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ಭಗತ್ ಸಿಂಗ್ ಜಯಂತಿ
ಭಾರತದ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ನಾಯಕ ಭಗತ್ ಸಿಂಗ್ ಅವರ ಜನ್ಮದಿನವನ್ನು ಸೆಪ್ಟೆಂಬರ್ 28ರಂದು ಸ್ಮರಿಸಲಾಗುತ್ತದೆ.

2) ವಿಶ್ವ ಸುದ್ದಿ ದಿನ: ಮಾಧ್ಯಮ ರಂಗದ ಬೆಳವಣಿಗೆ, ಮಾಹಿತಿಯ ಒರತೆ ಮತ್ತು ವಿಶ್ವಾಸಾರ್ಹತೆಯ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

3) ವಿಶ್ವ ರೇಬೀಸ್ ದಿನ (World Rabies Day) ಪ್ರತಿ ವರ್ಷ ಸೆಪ್ಟೆಂಬರ್ 28ರಂದು ರೇಬೀಸ್ ರೋಗದ ಕುರಿತು ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ.

ಸುಭಾಷಿತ

ಒಂದು ಅಗುಳು ಅನ್ನದ ಹಿಂದೆ ಕೂಡ ಹಲವರ ಪರಿಶ್ರಮ ಇರುತ್ತದೆ. ಆದ್ದರಿಂದ, ಆಹಾರ ಸೇವಿಸುವಾಗ ವ್ಯರ್ಥ ಮಾಡುವುದು ಶ್ರೇಯಸ್ಕರವಲ್ಲ.

–ಶಿವಕುಮಾರ ಸ್ವಾಮೀಜಿ

ದೇಶದ ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು: ಶಾಂತನಗೌಡ ಪಾಟೀಲ್ ದಿದ್ದಗಿ

❑ ನೈಜ್ಯ ದೆಸೆ ನ್ಯೂಸ್





ಲಿಂಗಸಗೂರು: ದೇಶದ ಇತಿಹಾಸ ಮತ್ತು ಭವಿಷ್ಯ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಕ ವೃತ್ತಿ ಸಾಮಾನ್ಯ ವೃತ್ತಿಯಲ್ಲ, ರಾಷ್ಟ್ರದ ಭವಿಷ್ಯ ರೂಪಿಸುವ ಶ್ರೇಷ್ಠ ಜವಾಬ್ದಾರಿಯಾಗಿದೆ ಎಂದು ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಜಿಲ್ಲಾ ಉಪಾಧ್ಯಕ್ಷ ಶಾಂತನಗೌಡ ಪಾಟೀಲ್ ದಿದ್ದಗಿ ಹೇಳಿದರು.ಪಟ್ಟಣದ ಶ್ರೀ ವಿಜಯಮಹಾಂತೇಶ್ವರ ಶಾಖಾ ಮಠದಲ್ಲಿ ತಾಲೂಕು ವಿವಿಧ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕ–ರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು " ಚಾಣಕ್ಯ, ವಿದ್ಯಾರಣ್ಯ, ಗುರು ಗೋವಿಂದ ಭಟ್ಟ ಸೇರಿದಂತೆ ಅನೇಕ ಮಹಾನ್ ಗುರುಗಳು ದೇಶ ಕಂಡ ಶ್ರೇಷ್ಠ ವ್ಯಕ್ತಿಗಳನ್ನು ರೂಪಿಸಿದ್ದಾರೆ. ರಾಷ್ಟ್ರಪತಿ, ಪ್ರಧಾನಿ, ವಿಜ್ಞಾನಿಗಳು ಸೇರಿದಂತೆ ಸಮಾಜದ ಉನ್ನತ ಹಂತದಲ್ಲಿರುವ ಸಾಧಕರ ಹಿಂದೆ ಶಿಕ್ಷಕರ ಮಾರ್ಗದರ್ಶನವಿದೆ" ಎಂದರು. ಅಲ್ಲದೆ, "ಶಿಕ್ಷಕರು ಕೇವಲ ಪಾಠ ಬೋಧನೆಗೆ ಸೀಮಿತವಾಗದೆ ಮಕ್ಕಳಲ್ಲಿ ಆತ್ಮವಿಶ್ವಾಸ ಹಾಗೂ ಸಾಧನೆಯ ಛಲ ಬೆಳೆಸಬೇಕು. ಬಡತನ ಸಾಧನೆಗೆ ಅಡ್ಡಿಯಲ್ಲ ಎಂಬುದಕ್ಕೆ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ಕೆ.ಆರ್. ನಾರಾಯಣನ್ ಅವರ ಜೀವನವೇ ಸಾಕ್ಷಿ. ಮಕ್ಕಳಲ್ಲಿರುವ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸುವುದು ಶಿಕ್ಷಕರ ಕರ್ತವ್ಯ" ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸದ ಮಾಜಿ ಶಾಸಕ ಡಿ.ಎಸ್. ಹೂಲಗೇರಿ ಮಾತನಾಡಿ, "ಖಾಸಗಿ ಶಿಕ್ಷಣ ಸಂಸ್ಥೆಗಳು ಕೇವಲ ಲಾಭಕ್ಕಾಗಿ ಶಾಲೆ ನಡೆಸದೆ, ಭವ್ಯ ಭಾರತವನ್ನು ಕಟ್ಟುವಂತಹ ಮಕ್ಕಳನ್ನು ರೂಪಿಸುತ್ತಿವೆ. ಒಂದು ಕಾಲದಲ್ಲಿ ಶಿಕ್ಷಣಕ್ಕಾಗಿ ಬೇರೆ ಕಡೆಗೆ ಹೋಗಬೇಕಿದ್ದ ಪರಿಸ್ಥಿತಿ ಇತ್ತು. ಆದರೆ ಇಂದು ಲಿಂಗಸಗೂರು ಶೈಕ್ಷಣಿಕ ಹಬ್ ಆಗಿ ಬೆಳೆಯುತ್ತಿದ್ದು, ಸ್ಥಳೀಯವಾಗಿಯೇ ಗುಣಮಟ್ಟದ ಶಿಕ್ಷಣ ದೊರೆಯುತ್ತಿದೆ" ಎಂದರು.ಒಕ್ಕೂಟದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗರಾಜ ಮಸ್ಕಿ ವಕೀಲರು ಮಾತನಾಡಿ, "ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ಅನಗತ್ಯ ನಿಯಮಗಳನ್ನು ಹೇರಿ ಸವಾರಿ ಮಾಡಬಾರದು. ಸರ್ಕಾರಿ ಶಾಲೆಗಳಂತೆ ಖಾಸಗಿ ಶಾಲೆಗಳಿಗೂ ಒಂದೇ ಕಾನೂನು ಇರಬೇಕು. ಅತ್ಯಲ್ಪ ವೇತನಕ್ಕೆ ಸೇವೆ ಸಲ್ಲಿಸುವ ಖಾಸಗಿ ಶಾಲಾ ಶಿಕ್ಷಕರಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ಅನುದಾನದಿಂದ ಕನಿಷ್ಠ 5 ಲಕ್ಷ ರೂಪಾಯಿ ಆರೋಗ್ಯ ವಿಮೆ ಜಾರಿಗೊಳಿಸಬೇಕು ಮತ್ತು ಸರ್ಕಾರಿ ಶಿಕ್ಷಕರಂತೆ ಖಾಸಗಿ ಶಿಕ್ಷಕರನ್ನೂ ಗುರುತಿಸಿ ಪ್ರಶಸ್ತಿ ನೀಡಬೇಕು" ಎಂದು ಒತ್ತಾಯಿಸಿದರು.ಖಾಸಗಿ ಶಿಕ್ಷಣ ಸಂಸ್ಥೆಗಳ 76 ಉತ್ತಮ ಶಿಕ್ಷಕ–ರಿಗೆ 'ಉತ್ತಮ ಶಿಕ್ಷಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಇದೇ ವೇಳೆ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶಿವರಾಜ ಕೆಂಭಾವಿ, ಪತ್ರಕರ್ತ ಹನುಮಂತ ಕನ್ನಾಳ ಹಾಗೂ ನಿವೃತ್ತ ಜಿಲ್ಲಾ ದೈಹಿಕ ಪರಿವೀಕ್ಷಣಾಧಿಕಾರಿಗಳಾದ ರುದ್ರಮುನಿ ಸ್ವಾಮಿ ರಾಜಗುರು ಅವರನ್ನು ಸನ್ಮಾನಿಸಲಾಯಿತು.ನಂದವಾಡಗಿ ಮಹಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹಾಗೂ ದೇವರಭೂಪುರದ ಅಭಿನವ ಗಜದಂಡ ಶಿವಾಚಾರ್ಯ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.ಸಮಾರಂಭದಲ್ಲಿ ಒಕ್ಕೂಟದ ತಾಲೂಕು ಅಧ್ಯಕ್ಷ ನರಸಪ್ಪ ಯಾದವ್, ಜಿಲ್ಲಾ ಸಹ ಕಾರ್ಯದರ್ಶಿ ಟಿ ಬಸವರಾಜ್, ಜಿಲ್ಲಾ ಉಪಾಧ್ಯಕ್ಷರಾದ ಶಾಂತಗೌಡ ಪಾಟೀಲ ದಿದ್ಗೀ , ಶರ್ಫುದ್ದಿನ್ ಪೋತ್ನಾಳ್ , ಚಂದ್ರಶೇಖರ್ ಬಲ್ಲಟಗಿ, ಡಾ.ಸಿದ್ಧರಾಮಪ್ಪ ಸಾಹುಕಾರ, ಸಂಜೀವ್ ಕುಮಾರ್ ಕಂದಗಲ್, ಮಂಜುನಾಥ ಸ್ವಾಮಿ ತೋರಣದಿನ್ನಿ, ಆದಯ್ಯ ದಳಪತಿ, ಶಿವಕುಮಾರ್ ಎನ್, ಮಾರೆಪ್ಪ ಕೊತ್ತದೊಡ್ಡಿ, ಶಂಕರ್ ಲಿಂಗಯ್ಯ ತಾತ, ವಿನಯ್ ಕುಮಾರ್ ಗಣಾಚಾರಿ, ಶಿವರಾಜ್ ಕೆಂಭಾವಿ, ಉದಯ್ ಕುಮಾರ್ ಕಂಬಾರ, ಡಾ ಸಂಜೀವ್ ಕುಮಾರ, ಮಹಿಬೂಬ್ ಕಂದಗಲ್, ಪಿಜಿ ಪವಾರ್,ಕೆ.ವಿ.ರೆಡ್ಡಿ, ಡಾ. ಅಂಬಿಕಾ ಮಟಗಲ್, ಸುಭಾಷಿಣಿ, ರಜಬಲಿ ನದಾಫ್, ಶಂಕರಗೌಡ ಗೌಡರ್, ಕೆಂಚಪ್ಪ ಬಾವಿಮನಿ, ಬಸವರಾಜ ಕೊಡ್ಲಿ, ಡಾ. ಗಂಗಾಧರಯ್ಯ ಸ್ವಾಮಿ, ಮಲ್ಲಿಕಾರ್ಜುನ ಕಳಸದಗುಡಿ, ಗವಿಸಿದ್ದಪ್ಪ ಗೌಡುರ, ಮಹಮ್ಮದ್ ಫಜಲ್, ಖಾಜಾ ಹುಸೇನ್, ಬಸವರಾಜ ಬಡಿಗೇರ, ಅಮರೇಶ, ಇನ್ನಿತರ ಒಕ್ಕೂಟದ ಪದಾಧಿಕಾರಿಗಳು ಹಾಗೂ ಹಲವು ಪ್ರಮುಖರು ಉಪಸ್ಥಿತರಿದ್ದರು.

ಐತಿಹಾಸಿಕ ತ್ರಿವಳಿ ಗೆಲುವು

❑ ನೈಜ್ಯ ದೆಸೆ ನ್ಯೂಸ್





ಸಿಂಧನೂರು : ತಾಲೂಕು ಮಟ್ಟದ ಥ್ರೋಬಾಲ್ ಕ್ರೀಡಾಕೂಟದಲ್ಲಿ ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ, ಆರ್.ಹೆಚ್. ಕಾಲೋನಿ ನಂ. 1, ಸಿಂಧನೂರು ಶಾಲೆಯ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ಮಾಡಿದ್ದಾರೆ. ಇಂದು ನಡೆದ ಸಿಂಧನೂರು ತಾಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಥ್ರೋಬಾಲ್ ಕ್ರೀಡಾಕೂಟದಲ್ಲಿ ಶಾಲೆಯ ವಿದ್ಯಾರ್ಥಿಗಳು ಮೂರು ವಿಭಾಗಗಳಲ್ಲೂ ಪ್ರಥಮ ಸ್ಥಾನ ಪಡೆದು, ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.ಪ್ರಾಥಮಿಕ ಶಾಲಾ ವಿಭಾಗ:ಬಾಲಕರ ಥ್ರೋಬಾಲ್: ಪ್ರಥಮ ಸ್ಥಾನ; ಜಿಲ್ಲಾ ಮಟ್ಟಕ್ಕೆ ಆಯ್ಕೆ.ಬಾಲಕಿಯರ ಥ್ರೋಬಾಲ್: ಪ್ರಥಮ ಸ್ಥಾನ; ಜಿಲ್ಲಾ ಮಟ್ಟಕ್ಕೆ ಆಯ್ಕೆ.ಪ್ರೌಢಶಾಲಾ ವಿಭಾಗ:ಬಾಲಕಿಯರ ಥ್ರೋಬಾಲ್: ಪ್ರಥಮ ಸ್ಥಾನ; ಜಿಲ್ಲಾ ಮಟ್ಟಕ್ಕೆ ಆಯ್ಕೆ.ಮೂರು ವಿಭಾಗಗಳಲ್ಲೂ ಪ್ರಥಮ ಸ್ಥಾನ ಗಳಿಸಿರುವುದು ಶಾಲೆಗೆ ಹೆಮ್ಮೆಯ ಸಂಗತಿಯಾಗಿದೆ.ಜಿಲ್ಲಾ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುವ ಎಲ್ಲಾ ಕ್ರೀಡಾಪಟುಗಳಿಗೆ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗಗಳ ಗುರುಬಳಗ, ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಖಆಒಅ), ಗ್ರಾಮದ ಹಳೆಯ ವಿದ್ಯಾರ್ಥಿಗಳು ಮತ್ತು ಕ್ರೀಡಾಪ್ರೇಮಿಗಳ ಪರವಾಗಿ ಹಾರ್ದಿಕ ಅಭಿನಂದನೆಗಳು.ವಿದ್ಯಾರ್ಥಿಗಳ ಪರಿಶ್ರಮ, ಶಿಸ್ತು ಮತ್ತು ತಂಡದ ಮನೋಭಾವವನ್ನು ಶಾಲೆಯು ಅಭಿನಂದಿಸುತ್ತದೆ. ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿಯೂ ಉತ್ತಮ ಪ್ರದರ್ಶನ ನೀಡಿ ಮತ್ತಷ್ಟು ಯಶಸ್ಸು ಸಾಧಿಸಲಿ ಎಂದು ಶುಭ ಹಾರೈಸಲಾಗಿದೆ. ಉನ್ನತೀಕರಿಸಿದ ಸರಕಾರಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆ ಆರ್.ಹೆಚ್. ಕಾಲೋನಿ ನಂ. 1, ಸಿಂಧನೂರು

ನೈಜ್ಯ ದೆಸೆ
ಕನ್ನಡ
ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಚಿಕ್ಕಹೊನ್ನಕುಣಿ ನೀರಾವರಿ ಕಚೇರಿ ಸ್ಥಳಾಂತರ ವಿರೋಧಿಸಿ ಶಾಸಕಿ ಕರಿಯಮ್ಮ ಜಿ. ನಾಯಕ್ ನೇತೃತ್ವದಲ್ಲಿ ಹೋರಾಟ: ಗೋವಿಂದರಾಜ ತಿಂಪೂರು

❑ ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ.: ಚಿಕ್ಕಹೊನ್ನಕುಣಿ ನೀರಾವರಿ ಇಲಾಖೆಯ ಕಚೇರಿಯನ್ನು ಸ್ಥಳಾಂತರಿಸುವುದನ್ನು ವಿರೋಧಿಸಿ ಶಾಸಕಿ ಶ್ರೀಮತಿ ಕರಿಯಮ್ಮ ಜಿ. ನಾಯಕ್ ಅವರ ನೇತೃತ್ವದಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಜೆಡಿಎಸ್ ಎಸ್‌ಟಿ ಮೋರ್ಚಾ ತಾಲೂಕು ಪ್ರಧಾನ ಕಾರ್ಯದರ್ಶಿ ಗೋವಿಂದರಾಜ ನಾಯಕ ತಿಂಪೂರು ಹೇಳಿದರು.ಭಾನುವಾರ ಜಾಲಹಳ್ಳಿ ನಿರೀಕ್ಷಣಾ ಮಂದಿರದಲ್ಲಿ ನಡೆದ ಜೆಡಿಎಸ್ ಪೂರ್ವಭಾವಿ ಸಭೆ ಹಾಗೂ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರಿಗೆ ಅನುಕೂಲವಾಗಿರುವ ಚಿಕ್ಕಹೊನ್ನಕುಣಿ ನೀರಾವರಿ ಕಚೇರಿಯನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಸಬಾರದು ಎಂದು ಒತ್ತಾಯಿಸಿದರು.ರೈತರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡಬೇಕು ಹಾಗೂ ರೈತರ ಖಾತೆಗಳಿಗೆ ಬೆಳೆ ಪರಿಹಾರವನ್ನು ತಕ್ಷಣ ಜಮಾ ಮಾಡಬೇಕು ಎಂಬ ಬೇಡಿಕೆಗಳನ್ನೂ ಮುಂದಿಟ್ಟುಕೊಂಡು ಹೋರಾಟ ನಡೆಸಲಾಗುವುದು ಎಂದರು.ಕ್ಷೇತ್ರದ ವಿವಿಧ ಗ್ರಾಮಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಹಾಗೂ ಜೆಡಿಎಸ್ ಕಾರ್ಯಕರ್ತರು ಹೋರಾಟದಲ್ಲಿ ಭಾಗವಹಿಸಲಿದ್ದು, ದೇವದುರ್ಗ ನಗರದ ಜಹಿರುದ್ದೀನ್ ಪಾಷಾ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ ಪಾದಯಾತ್ರೆ ನಡೆಸಲಾಗುವುದು ಎಂದು ತಿಳಿಸಿದರು. ಜೆಡಿಎಸ್ ಮುಖಂಡ ವೆಂಕಟರೆಡ್ಡಿ ಬೆನಕನ ಮಾತನಾಡಿ, ಶಾಸಕಿ ಕ–ರಿಯಮ್ಮ ಜಿ. ನಾಯಕ್ ಅವರು ರೈತರ ಪರವಾಗಿ ಹಗಲಿರುಳು ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ ತಾಲೂಕಿನ ಎಲ್ಲಾ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.ಈ ಸಂದರ್ಭದಲ್ಲಿ ಜೆಡಿಎಸ್ ಹಿಂದುಳಿದ ವರ್ಗಗಳ ತಾಲೂಕು ಅಧ್ಯಕ್ಷ ಬಸವರಾಜ್ ಚಿಂಚೋಡಿ, ಎಸ್‌ಟಿ ಮೋರ್ಚಾ ತಾಲೂಕು ಕಾರ್ಯದರ್ಶಿ ಶಿವನಗೌಡ, ತಾಲೂಕು ಜೆಡಿಎಸ್ ಘಟಕದ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಗೋವಿಂದ, ಎಸ್‌ಟಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ರಂಗಪ್ಪ ಕಾವಲಿ, ಅಲ್ಪಸಂಖ್ಯಾತರ ಘಟಕದ ಕಾರ್ಯದರ್ಶಿ ಮಕತುಮ ಜಾಲಹಳ್ಳಿ, ದೇವದುರ್ಗದ ನಾರಾಯಣ ಪಾಟೀಲ್ (ಯರಗುಡ್ಡ), ವೆಂಕಟ–ರೆಡ್ಡಿ (ಕಕ್ಕಲದೊಡ್ಡಿ), ರಂಗನಾಥ್ (ಮುರಳ್), ಮೌನೇಶ್ (ಬೆಂಗಂಡಿ), ಎಸ್‌ಸಿ ಘಟಕದ ಅಧ್ಯಕ್ಷ ಹುಸನಪ್ಪ ಗುತ್ತೇದಾರ್, ತಿಮ್ಮಪ್ಪ ಜಲ್ಲಿ, ದೇವಪ್ಪ, ಜಗದೀಶ್, ಬಸವರಾಜ್, ಮಲ್ಲಪ್ಪ ಬನಗಂಡಿ, ದುರುಗಪ್ಪ ಅದಾವಣಿ, ಭೀಮಣ್ಣ ಸಾಗರ್, ಅಮರೇಶ್ ಹಣಬಿ ಸೇರಿದಂತೆ ನೂರಾರು ಜೆಡಿಎಸ್ ಕಾರ್ಯಕರ್ತರು ಉಪಸ್ಥಿತರಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಸಾಹಿತ್ಯ ಸಿಂಚನ

ಕಳೆದುಹೋದ ನಗುವಿನ ಹುಡುಕಾಟ

ಕನ್ನಡಿ ಮುಂದೆ ನಿಂತಾಗ ಇಂದು,
ಮುಖವಿದೆ ಆದರೆ ನಗು ಕಾಣದು,
ಕಣ್ಣಿನಲ್ಲಿ ಸಾವಿರ ಮಾತಿದ್ದರೂ,
ಮನದ ನೋವು ಮಾತ್ರ ಹೊರಬರದು.

ಒಮ್ಮೆ ಸಣ್ಣ ಕ್ಷಣವೂ ಸಾಕಾಗಿತ್ತು,
ತುಟಿಗಳ ಮೇಲೆ ನಗು ಮೂಡಿಸಲು,
ಇಂದು ಸಾವಿರ ಕಾರಣಗಳಿದ್ದರೂ,
ಮನಸ್ಸು ಸಿದ್ಧವಿಲ್ಲ ನಗಲು.

ಹಳೆಯ ದಿನಗಳ ದಾರಿಯಲ್ಲಿ ನಡೆದು,
ಮರೆತ ಸಂತೋಷವ ಹುಡುಕುತ್ತೇನೆ,
ಬಾಲ್ಯದ ಆ ಮುಗ್ಧ ನಗುವನ್ನು,
ನೆನಪುಗಳ ನಡುವೆ ಕರೆಯುತ್ತೇನೆ.

ಕಳೆದುಹೋದ ಕ್ಷಣಗಳು ಹೇಳುತ್ತವೆ,
"ನಿನ್ನ ನಗು ಇನ್ನೂ ನಿನ್ನೊಳಗಿದೆ,"
ಮನದ ಬಾಗಿಲು ತೆರೆದು ನೋಡಿದರೆ,
ಅದು ಮೌನದ ಹಿಂದೆ ಅಡಗಿದೆ.

ಕಣ್ಣೀರಿನ ಹನಿಗಳ ನಡುವೆ ಕೂಡ,
ಒಂದು ಪುಟ್ಟ ಭರವಸೆ ಉಳಿದಿದೆ,
ಕತ್ತಲಾದ ಈ ಬದುಕಿನ ದಾರಿಯಲ್ಲಿ,
ಹೊಸ ನಗುವಿನ ಬೆಳಕು ಕಾದಿದೆ.

ನಿನ್ನೆ ಕಳೆದುಕೊಂಡ ನಗುವಿಗಾಗಿ,
ಇಂದು ಹುಡುಕಾಟ ಮುಂದುವರಿಯಲಿ,
ನಾಳೆಯ ಹೊಸ ಪ್ರಭಾತದೊಂದಿಗೆ,
ನನ್ನ ನಗು ಮತ್ತೆ ಅರಳಲಿ.

ಡಾ. ಹಾದಿಮನಿ ಕಾಳಿಂಗವರ್ಧನ ಅವರಿಗೆ

'ಡಾ. ಎಪಿಜೆ ಅಬ್ದುಲ್ ಕಲಾಂ ಎಕ್ಸಲೆನ್ಸ್ ಅವಾರ್ಡ್' ಪ್ರದಾನ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ತಾಲೂಕಿನ ರಾಮಸಾಗರದ *ಡಾ. ಹಾದಿಮನಿ ಕಾಳಿಂಗವರ್ಧನ ರವರಿಗೆ ತಮಿಳುನಾಡಿನ ಹೊಸೂರಿನಲ್ಲಿ ಇಂದು ನಡೆದ ಭವ್ಯ ಸಮಾರಂಭದಲ್ಲಿ ಸಮಾಜ ಸೇವಕ ಡಾ. ಹಾದಿಮನಿ ಕಾಳಿಂಗವರ್ಧನ ಅವರಿಗೆ ಪ್ರತಿಷ್ಠಿತ 'ಡಾ. ಎಪಿಜೆ ಅಬ್ದುಲ್ ಕಲಾಂ ಎಕ್ಸಲೆನ್ಸ್ ಅವಾರ್ಡ್' ಗೌರವ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.ಅಮೆರಿಕಾದ ಇಂಟರ್ನ್ಯಾಷನಲ್ ಅಕ್ರೆಡಿಟೇಶನ್ ಆರ್ಗನೈಸೇಶನ್ ಮತ್ತು ಭಾರತ ಸರ್ಕಾರದ ನೀತಿ ಆಯೋಗದ ಅಡಿಯಲ್ಲಿ ನೋಂದಾಯಿತವಾಗಿರುವ ಯುಪಿಎಫ್‌ಟಿ ಸಂಸ್ಥೆಯ ಅಂಗಸಂಸ್ಥೆಯಾದ, ಐಎಸ್‌ಒ ಪ್ರಮಾಣೀಕೃತ 'ಏಷ್ಯಾ ಇಂಟರ್ನ್ಯಾಷನಲ್ ಕಲ್ಚರ್ ರಿಸರ್ಚ್ ಯೂನಿವರ್ಸಿಟಿ' ಹಾಗೂ 'ಏಷ್ಯಾ ಇಂಟರ್ನ್ಯಾಷನಲ್ ಕಲ್ಚರಲ್ ಅಕಾಡೆಮಿ' ಜಂಟಿಯಾಗಿ ಈ ಕಾರ್ಯಕ್ರಮವನ್ನು ಆಯೋಜಿಸಿದ್ದವು.ಸಮಾಜ ಸೇವೆಗೆ ಸಂದ ಗೌರವ*: ಡಾ. ಹಾದಿಮನಿ ಕಾಳಿಂಗವರ್ಧನ ಅವರು ಸಮಾಜ ಸೇವಾ ಕ್ಷೇತ್ರದಲ್ಲಿ ಮಾಡಿರುವ ನಿರಂತರ ಹಾಗೂ ಅನುಪಮ ಸಾಧನೆಯನ್ನು ಗುರುತಿಸಿ ಈ ಸಾಲಿನ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಅವರ ಅರ್ಜಿ ಹಾಗೂ ಪ್ರೊಫೈಲ್ ಅನ್ನು ಕೂಲಂಕಷವಾಗಿ ಪರಿಶೀಲಿಸಿದ್ದ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು, ಸಮಾಜಕ್ಕೆ ಅವರು ನೀಡಿದ ಕೊಡುಗೆಯನ್ನು ಶ್ಲಾಘಿಸಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದೆ.*ಹೆಚ್ಚಿದ ಜವಾಬ್ದಾರಿ ಡಾ. ಹಾದಿಮನಿ* *ಕಾಳಿಂಗವರ್ಧನ* :ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಡಾ. ಹಾದಿಮನಿ ಕಾಳಿಂಗವರ್ಧನ ಅವರು, "ಭಾರತದ ಹೆಮ್ಮೆಯ ಜ್ಞಾನಿ, ಮಾಜಿ ರಾಷ್ಟ್ರಪತಿ ಡಾ. ಎಪಿಜೆ ಅಬ್ದುಲ್ ಕಲಾಂ ಅವರ ಹೆಸರಿನಲ್ಲಿ ಈ ಗೌರವ ಲಭಿಸಿರುವುದು ನನ್ನ ಜೀವನದ ಸೌಭಾಗ್ಯ. ಸಮಾಜ ಸೇವೆಯನ್ನು ಯಾವುದೇ ಪ್ರಶಸ್ತಿಯ ನಿರೀಕ್ಷೆಯಿಲ್ಲದೆ ಮಾಡುತ್ತಾ ಬಂದವನು ನಾನು. ಈ ಪುರಸ್ಕಾರವು ನನ್ನ ಮೇಲಿನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನೆರವಾಗುವ ನನ್ನ ಈ ಸೇವಾ ಕಾರ್ಯಗಳು ಮುಂದೆಯೂ ನಿರಂತರವಾಗಿ ಮುಂದುವರಿಯಲಿವೆ. ನನ್ನ ಸೇವೆಯನ್ನು ಗುರುತಿಸಿದ ಏಷ್ಯಾ ಇಂಟರ್ನ್ಯಾಷನಲ್ ಸಂಸ್ಥೆಯ ಆಡಳಿತ ಮಂಡಳಿಗೆ ಮತ್ತು ನನ್ನ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ನಾನು ಕೃತಜ್ಞತೆ ಸಲ್ಲಿಸುತ್ತೇನೆ," ಎಂದು ಭಾವುಕರಾಗಿ ನುಡಿದರು.ಇಂದು (ಸೆಪ್ಟೆಂಬರ್ 27) ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದು, *ಡಾ. ಹಾದಿಮನಿ ಕಾಳಿಂಗವರ್ಧನ ಅವರಿಗೆ ಪ್ರಶಸ್ತಿ ಫಲಕ ನೀಡಿ ಗೌರವಿಸಿದರು. ಪ್ರಶಸ್ತಿ ಸ್ವೀಕರಿಸಿದ ಡಾ. ಹಾದಿಮನಿ ಕಾಳಿಂಗವರ್ಧನ ಅವರಿಗೆ ಸಮಾಜದ ವಿವಿಧ ಗಣ್ಯರು ಹಾಗೂ ಹಿತೈಷಿಗಳಿಂದ ಅಭಿನಂದನೆಗಳ ಸುರಿಮಳೆಯಾಗುತ್ತಿದೆ. ವರದಿ : ಜಿಲಾನಸಾಬ್ ಬಡಿಗೇರ್

ಗಂಗಾವತಿ –ದರೋಜಿ ರೈಲು ಮಾರ್ಗಕ್ಕೆ ಅನುದಾನಕ್ಕೆ ಆಗ್ರಹ: ಸಚಿವ ವಿ. ಸೋಮಣ್ಣಗೆ ಮನವಿ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ : ಗಂಗಾವತಿದರೋಜಿ (36 ಕಿ.ಮೀ) ಹೊಸ ಬ್ರಾಡ್‌ಗೇಜ್ ರೈಲ್ವೆ ಮಾರ್ಗಕ್ಕೆ ವಿಶೇಷ ಅನುದಾನ ಬಿಡುಗಡೆ ಮಾಡುವುದು ಸೇರಿದಂತೆ ಗಂಗಾವತಿ ಭಾಗದ ರೈಲ್ವೆ ಅಭಿವೃದ್ಧಿಯ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕೋರಿ ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಸಲ್ಲಿಸಲಾಯಿತು.ಬೆಂಗಳೂರಿನ ಸಚಿವರ ಕಚೇರಿಯಲ್ಲಿ ಗಂಗಾವತಿಯ ಮಾಜಿ ಶಾಸಕ ಪರಣ್ಣ ಮುನವಳ್ಳಿ ಹಾಗೂ ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳ ನಿಯೋಗವು ಸಚಿವರಿಗೆ ಮನವಿ ಪತ್ರ ಹಸ್ತಾಂತರಿಸಿತು.ಗಂಗಾವತಿ ಪ್ರದೇಶವು ಭತ್ತದ ನಾಡು, ಹನುಮನ ಜನ್ಮಸ್ಥಳ ಹಾಗೂ ಹಂಪಿಕಿಷ್ಕಿಂದೆಯ ಹೆಬ್ಬಾಗಿಲಾಗಿದ್ದರೂ ರೈಲ್ವೆ ಸಂಪರ್ಕದಲ್ಲಿ ಹಿಂದುಳಿದಿದೆ ಎಂದು ನಿಯೋಗವು ಸಚಿವರ ಗಮನ ಸೆಳೆಯಿತು. ಗಂಗಾವತಿದರೋಜಿ ನೇರ ರೈಲು ಮಾರ್ಗ ನಿರ್ಮಾಣವಾದರೆ ಬಳ್ಳಾರಿಗೆ ಪ್ರಯಾಣಿಸುವ ಅಂತರವು ಸುಮಾರು 57 ಕಿ.ಮೀಗಳಷ್ಟು ಕಡಿಮೆಯಾಗಲಿದೆ. ಇದರಿಂದ ಗಂಗಾವತಿ, ಕಂಪ್ಲಿ ಹಾಗೂ ಸಂಡೂರು ಭಾಗದ ಜನರಿಗೆ ಆರ್ಥಿಕವಾಗಿ ಮತ್ತು ಸಮಯದ ಉಳಿತಾಯದ ದೃಷ್ಟಿಯಿಂದ ಹೆಚ್ಚಿನ ಅನುಕೂಲವಾಗಲಿದೆ ಎಂದು ವಿವರಿಸಿದರು.ಈಗಾಗಲೇ ಯೋಜನೆಯ ಸರ್ವೇ ಹಾಗೂ ಡಿಪಿಆರ್ (ವಿವರವಾದ ಯೋಜನಾ ವರದಿ) ಸಿದ್ಧವಾಗಿದ್ದು, ಮುಂಬರುವ 2026–27ನೇ ಸಾಲಿನಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಆರಂಭಿಸಬೇಕು ಎಂದು ಒತ್ತಾಯಿಸಿದರು.ಗೋವಾ ರೈಲು ವಿಸ್ತರಣೆಗೆ ಬೇಡಿಕೆ*:ಇದೇ ವೇಳೆ ಸಿಂಧನೂರುಗಂಗಾವತಿ ಹುಬ್ಬಳ್ಳಿ ಪ್ಯಾಸೆಂಜರ್ ರೈಲನ್ನು ಗೋವಾದ ಮಡಗಾಂವ್ ವರೆಗೆ ವಿಸ್ತರಿಸುವಂತೆ ಮನವಿ ಮಾಡಲಾಯಿತು. ಈ ವಿಸ್ತರಣೆಯಿಂದ ಹಂಪಿ, ಆನೆಗುಂದಿ ಹಾಗೂ ಕಿಷ್ಕಿಂದಾ ಧಾಮಗಳಿಗೆ ಆಗಮಿಸುವ ದೇಶ–ವಿದೇಶಿ ಪ್ರವಾಸಿಗರಿಗೆ ಅತ್ಯಂತ ಅನುಕೂಲವಾಗಲಿದ್ದು, ಪ್ರವಾಸೋದ್ಯಮಕ್ಕೂ ಹೆಚ್ಚಿನ ಉತ್ತೇಜನ ಸಿಗಲಿದೆ ಎಂದು ನಿಯೋಗವು ಮನವರಿಕೆ ಮಾಡಿಕೊಟ್ಟಿತು.ಗಂಗಾವತಿ ನ್ಯೂ ಸಿಟಿ ಹಾಲ್ಟ್'ಗೆ ಒತ್ತು*:ಸಾರಿಗೆ ಸಂಪರ್ಕವನ್ನು ಮತ್ತಷ್ಟು ಸುಗಮಗೊಳಿಸುವ ನಿಟ್ಟಿನಲ್ಲಿ, ಗಂಗಾವತಿಯ ನೂತನ ಬಸ್ ನಿಲ್ದಾಣದ ಸಮೀಪ "ಗಂಗಾವತಿ ನ್ಯೂ ಸಿಟಿ ಹಾಲ್ಟ್" ಹೆಸರಿನ ಹೊಸ ರೈಲ್ವೆ ನಿಲ್ದಾಣ ಅಥವಾ ಹಾಲ್ಟ್ ನಿರ್ಮಿಸಬೇಕೆಂದು ಪತ್ರದಲ್ಲಿ ಒತ್ತಾಯಿಸಲಾಗಿದೆ. ಇದರಿಂದ ಬಸ್ ಮತ್ತು ರೈಲು ಪ್ರಯಾಣಿಕರ ನಡುವಿನ ಕೊಂಡಿ ಸುಲಭವಾಗಲಿದೆ ಎಂದು ತಿಳಿಸಲಾಗಿದೆ.ಈ ಸಂದರ್ಭದಲ್ಲಿ ಗಂಗಾವತಿ ತಾಲೂಕು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸುರೇಶ್ ಸಿಂಗನಾಳ, ವಕೀಲರ ಸಂಘದ ಕಾರ್ಯದರ್ಶಿ ಹೆಚ್.ಎಂ. ಮಂಜುನಾಥ, ಶ್ರೀ ಕೊಟ್ಟೂರೇಶ್ವರ ವಿದ್ಯಾವರ್ಧಕ ಸಂಘದ ಸದಸ್ಯ ಕೆ. ವಿಶ್ವನಾಥ ಸ್ವಾಮಿ ಸೇರಿದಂತೆ ಪ್ರಮುಖ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತ–

ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಶ್ರೀ ಎಸ್. ಎಸ್.ವಿದ್ಯಾಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಶ್ರೀ ಬ್ರಹ್ಮಲಿಂಗೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಹಿರಿಯ ಶಿಕ್ಷಕರಾದ ವಿಠ್ಠಲಸಿಂಗ್ ಅಣ್ಣುಸಿಂಗ ವಿಜಾಪುರ ಇವರು ಕರ್ತವ್ಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆಗೈದ ಪ್ರಯುಕ್ತ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ,ವಿಜಯಪುರ ತಾಲ್ಲೂಕು ಘಟಕ ತಾಳಿಕೋಟಿ 2026–2027ನೇ ಸಾಲಿನ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು 27–09–2026 ಭಾನುವಾರ ಕಂದಗಲ್ ಹನುವಂತರಾಯ ರಂಗ ಮಂದಿರ ವಿಜಯಪುರದಲ್ಲಿ ಪ್ರದಾನ ಮಾಡಲಾಯಿತು. ಅಭಿನಂದನೆ: ಸಂಸ್ಥೆ ಶಿಕ್ಷಕರಾದ ವಿಜಾಪುರ ಇವರಿಗೆ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದ್ದಕ್ಕಾಗಿ ಸಂಸ್ಥೆಯ ಅಧ್ಯಕ್ಷರಾದ ಎಚ್.ಎಸ್.ಪಾಟೀಲ,ಆಡಳಿತಾಧಿಕಾರಿಗಳಾದ ಕಿರಣ ಎಚ್.ಪಾಟೀಲ, ಕಾರ್ಯದರ್ಶಿ ಸಚಿನ ಎಚ್.ಪಾಟೀಲ, ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದಜೆ.ಎಮ್.ಕೊಣ್ಣುರ ಹಾಗೂ ಎಸ್.ಎಸ್.ವಿದ್ಯಾಸಂಸ್ಥೆಯ ಸಮಸ್ತ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಅಭಿನಂದಿಸಿ ಹರ್ಷ ವ್ಯಕ್ತ ಪಡಿಸಿದ್ದಾರೆ.



ಸುದ್ದಿ ಮತ್ತು
ಜಾಹೀರಾತಿಗಾಗಿ ಸಂಪರ್ಕಿಸಿ
9902277588

ಕಂಪ್ಲಿಯಲ್ಲಿ ಅದ್ಧೂರಿ 'ಮಹಾಗಣಪತಿ' ವಿಸರ್ಜನಾ ಮೆರವಣಿಗೆ: ಸಾಂಸ್ಕೃತಿಕ ವೈಭವ, ಕೋಮು ಸೌಹಾರ್ದತೆಯ ಸಂಗಮ

ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ: ಪಟ್ಟಣದಲ್ಲಿ ಹಿಂದೂ ಮಹಾ ಮಂಡಳಿ ವತಿಯಿಂದ ಪ್ರತಿಷ್ಠಾಪಿಸಲ್ಪಟ್ಟಿದ್ದ ಗಣೇಶ ಮೂರ್ತಿಯ ವಿಸರ್ಜನಾ ಮಹೋತ್ಸವ ಮತ್ತು ಶೋಭಾಯಾತ್ರೆ ಶನಿವಾರ ಸಂಜೆ ಅತ್ಯಂತ ಅದ್ಧೂರಿ ಹಾಗೂ ಸೌಹಾರ್ದಯುತ ವಾತಾವರಣದಲ್ಲಿ ಜರುಗಿತು. ಭಕ್ತಿ, ಸಂಭ್ರಮ ಮತ್ತು ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ನಡೆದ ಈ ಜಲಸ್ತಂಭನೋತ್ಸವದಲ್ಲಿ ಕಂಪ್ಲಿ ಪಟ್ಟಣ ಸೇರಿದಂತೆ ತಾಲ್ಲೂಕಿನ ಮೂಲೆಮೂಲೆಗಳಿಂದ ಆಗಮಿಸಿದ್ದ ಸಹಸ್ರಾರು ಭಕ್ತರು ಪಾಲ್ಗೊಂಡು ಸಡಗರಪಟ್ಟರು.ಸಾಗರೋಪಾದಿಯಲ್ಲಿ *ಹರಿದುಬಂದ ಭಕ್ತಸಾಗರ:ಪಟ್ಟಣದ ಗಂಗಾ ನಗರದಿಂದ ಆರಂಭಗೊಂಡ ಮೆರವಣಿಗೆಯು ಉದ್ಭವ ಮಹಾಗಣಪತಿ ದೇವಸ್ಥಾನದ ಮುಂಭಾಗ, ಡಾ. ರಾಜ್‌ಕುಮಾರ್ ರಸ್ತೆ ಮೂಲಕ ಸಾಗಿ ಅಂಬೇಡ್ಕರ್ ವೃತ್ತವನ್ನು ತಲುಪಿತು. ಅಲ್ಲಿಂದ ಮರಳಿ ರಾಜಕುಮಾರ್ ರಸ್ತೆ ಮೂಲಕ ಸಂಚರಿಸಿ, ಕೊನೆಗೆ ತುಂಗಭದ್ರಾ ನದಿಯ ತಟವನ್ನು ತಲುಪಿತು. ನದಿ ತೀರದಲ್ಲಿ ಜಮಾಯಿಸಿದ ಸಹಸ್ರಾರು ಭಕ್ತರ ಜಯಘೋಷಗಳ ನಡುವೆ ಗಣೇಶ ಮೂರ್ತಿಯ ವಿಸರ್ಜನೆಯನ್ನು ನೆರವೇರಿಸಲಾಯಿತು. ಮೆರವಣಿಗೆಯ ಅಂಗವಾಗಿ ಮುಂಜಾನೆಯಿಂದಲೇ ಗಣೇಶನಿಗೆ ವಿಶೇಷ ಅಭಿಷೇಕ, ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು.ಜನಪದ ಕಲೆಗಳ ವೈಭವ:ಮೆರವಣಿಗೆಯುದ್ದಕ್ಕೂ ವಿವಿಧ ಕಲಾತಂಡಗಳು ಪ್ರದರ್ಶಿಸಿದ ಸಾಂಪ್ರದಾಯಿಕ ಸಾಂಸ್ಕೃತಿಕ ಪ್ರದರ್ಶನಗಳು ಕಣ್ಮನ ಸೆಳೆದವು. ರೈತರ ಗೆಜ್ಜೆಕುಣಿತ, ನಂದಿಕೋಲು, ಹಕ್ಕಿಪಿಕ್ಕಿ ಮಹಿಳೆಯರ ಕುಣಿತ, ಡೊಳ್ಳು ಕುಣಿತ, ತಪ್ಪಡಿ, ತಾಷಾ ರಾಮ್ ಡೋಲ್, ಕಹಳೆ ವಾದನ, ಹಾಸ್ಯಗೊಂಬೆಗಳು ಹಾಗೂ ಜಾನ್ಜ್ ಮೇಳದ ಧ್ವನಿ ಮೆರವಣಿಗೆಯ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು. ಬಣ್ಣ ಬಣ್ಣದ ವಿದ್ಯುತ್ ಅಲಂಕಾರಗಳೊಂದಿಗೆ ಸಾಗಿದ ಗಣೇಶನ ಮೂರ್ತಿ ನೋಡುಗರ ಕಣ್ಣು ತಂಪಾಗಿಸಿತು. ಅಂಬೇಡ್ಕರ್ ವೃತ್ತದಿಂದ ಧ್ವನಿವರ್ಧಕಗಳ ಸದ್ದು ಮೊಳಗುತ್ತಿದ್ದಂತೆ ಮಹಿಳೆಯರು, ಪುರುಷರು ಹಾಗೂ ಮಕ್ಕಳು ನೃತ್ಯ ಮಾಡಿ ಸಂಭ್ರಮಿಸಿದರು.ಭಾವೈಕ್ಯತೆಯ ಸಂಕೇತ ಮಹಿಳೆಯರ ಭಕ್ತಿ ಸಮರ್ಪಣೆ:ಈ ಮೆರವಣಿಗೆಯ ಪ್ರಮುಖ ವಿಶೇಷತೆಯೆಂದರೆ, ಹಿಂದೂ ಮಹಾ ಮಂಡಳಿಯ ಪದಾಧಿಕಾರಿಗಳ ಜೊತೆಗೆ ಸರ್ವ ಸಮುದಾಯದ ಮುಖಂಡರು ಮತ್ತು ಭಕ್ತರು ಸಕ್ರಿಯವಾಗಿ ಪಾಲ್ಗೊಂಡು ಧಾರ್ಮಿಕ ಮತ್ತು ಸಾಂಸ್ಕೃತಿಕ ಏಕತೆಯನ್ನು ಪ್ರದರ್ಶಿಸಿದರು. ಅಲ್ಲದೆ, ವಿವಿಧ ಮಹಿಳಾ ಸಂಘಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕ ಮಹಿಳೆಯರು ಸಾಗುತ್ತಿದ್ದ ಗಣೇಶನಿಗೆ ಕಳಸದ ಆರತಿ ಮತ್ತು ತುಪ್ಪದ ಪ್ರಣತಿ ಬೆಳಗುವ ಮೂಲಕ ಭಕ್ತಿ ಸಮರ್ಪಿಸಿದ್ದು ಮೆರವಣಿಗೆಗೆ ಮತ್ತಷ್ಟು ಕಳೆ ತಂದಿತು.ಬಿಗಿ ಪೊಲೀಸ್ ಬಂದೋಬಸ್ತ್:* ಯಾವುದೇ ಅಹಿತಕರ ಘಟನೆ ನಡೆಯದಂತೆ ಮತ್ತು ಶಿಸ್ತಿನ ವಾತಾವರಣ ಕಾಪಾಡುವ ನಿಟ್ಟಿನಲ್ಲಿ ಪಟ್ಟಣದಲ್ಲಿ ಪೊಲೀಸ್ ಇಲಾಖೆಯಿಂದ ಕಟ್ಟುನಿಟ್ಟಿನ ಭದ್ರತೆ ಕೈಗೊಳ್ಳಲಾಗಿತ್ತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ) ಸುಮನ್ ಡಿ. ಪೆನ್ನೇಕರ್, ಹೆಚ್ಚುವರಿ ಎಸ್ಪಿ ನವೀನ್ ಕುಮಾರ್, ಡಿವೈಎಸ್ಪಿ ಪ್ರಸಾದ್ ಗೋಖಲೆ, ಕಂಪ್ಲಿ ಪಿಐ ಕೆ.ಬಿ. ವಾಸುಕುಮಾರ್ ಅವರ ನೇತೃತ್ವದಲ್ಲಿ ವಿವಿಧ ಠಾಣಾ ವ್ಯಾಪ್ತಿಯ ಸಿಪಿಐ, ಪಿಎಸ್‌ಐ, ಎಎಸ್‌ಐ ಹಾಗೂ ಪೊಲೀಸ್ ಪೇದೆಗಳು ಸೇರಿದಂತೆ 300ಕ್ಕೂ ಹೆಚ್ಚು ಸಿಬ್ಬಂದಿ ಬಿಗಿ ಭದ್ರತೆ ಒದಗಿಸಿದ್ದರು.ವರದಿ : ಜಿಲಾನಸಾಬ್ ಬಡಿಗೇರ್

ನೇಮಕಾತಿ ಪ್ರಕಟಣೆ

KEA ನೇಮಕಾತಿ 2026 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ 12, 2026KEA ನೇಮಕಾತಿ 2026: 210 ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಗ್ರೂಪ್–ಸಿ (ನೀರು ಸರಬರಾಜು ನಿರ್ವಾಹಕ, ಎಲೆಕ್ಟ್ರಿಷಿಯನ್) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 30–ಸೆಪ್ಟೆಂಬರ್–2026 ರೊಳಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: cetonline. karnataka.gov.in

ಪರಿಷತ್ ಸದಸ್ಯರಾದ ಹೊರಟ್ಟಿ ಅವರಿಗೆ ಮನವಿ

❏ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಬ್ರಿಲಿಯಂಟ್ ಶಾಲೆಯ ಚಿತ್ರಕಲಾ ಶಿಕ್ಷಕ ಸತೀಶ ಕೇಮಶೆಟ್ಟಿ ಇವರ ನೇತೃತ್ವದಲ್ಲಿ ದೃಶ್ಯಬಿಂಬ ಕಲಾ ಪ್ರತಿಷ್ಠಾನ(ರಿ) ವಿಜಯಪುರ ವತಿಯಿಂದ ವಿಧಾನ ಪರಿಷತ್ ನಿಕಟಪೂರ್ವ ಅಧ್ಯಕ್ಷರಾದ ಬಸವರಾಜ ಹೊರಟ್ಟಿ ಇವರಿಗೆ ಚಿತ್ರಕಲಾ ಶಿಕ್ಷಕರ ನೇಮಕಾತಿಗಾಗಿ ಕ್ರಮವಹಿಸಲು ಸರ್ಕಾರದ ಮೇಲೆ ಒತ್ತಡ ತರಲು ಒತ್ತಾಯಿಸಿ ಇತ್ತೀಚೆಗೆ ಕಳಕಳಿಯ ಮನವಿ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಅವರಿಗೆ ರಾಜ್ಯದಲ್ಲಿ ಸಂಕಷ್ಟದ ಸ್ಥಿತಿಯಲ್ಲಿರುವ ಬಡ ಚಿತ್ರಕಲಾವಿಧರ ಸಮಸ್ಯೆಗಳ ಕುರಿತು ವಿವರಿಸಲಾಯಿತು. ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಹೊರಟ್ಟಿ ಅವರು ಈ ಕು–ರಿತು ಮುಖ್ಯಮಂತ್ರಿಗಳೊಂದಿಗೆ ಮಾತನಾಡುವುದಾಗಿ ತಿಳಿಸಿದರು.

ಅರಕೇರಾ ತಾಲೂಕಿನ ಮದರಕಲ್ ಗ್ರಾಮದ ಅಂಬಾಮಠ ದಲ್ಲಿ ಶನಿವಾರ ಹುಣ್ಣಿಮೆ ಅಂಗವಾಗಿ ಅದ್ದೂರಿ ವಿಶೇಷ ಅನುಭವ ಕಾರ್ಯಕ್ರಮ ಯಶಸ್ವಿ

ಅಹಂಕಾರ, ದ್ವೇಷ ತೊರೆದು ಮಾನವೀಯತೆಯತ್ತ ಸಾಗೋಣ: ಶಿವನಾಥ ಮಹಾರಾಜರು

❏ ನೈಜ್ಯ ದೆಸೆ ನ್ಯೂಸ್



ಅರಕೇರಾ, ಸೆ.26: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿನ ಮದರಕಲ್ ಗ್ರಾಮದ ಅಂಭಾ ಮಠದಲ್ಲಿ ಶನಿವಾರ ಹುಣ್ಣಿಮೆ ಅಂಗವಾಗಿ ವಿಶೇಷ ಅನುಭವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಪ್ರವಚನ ನೀಡಿದ ಪಂಜಾಬ್ ರಾಜ್ಯದ ಜಲಂಧರ್‌ನ ವಾಲ್ಮೀಕಿ ಆಶ್ರಮದ ಪೀಠಾಧಿಪತಿ ರಾಜಯೋಗಿ ಶಿವನಾಥ ಮಹಾರಾಜರು, “ಸತ್ಸಂಗ ಎಂದರೆ ಕೇವಲ ಒಟ್ಟಿಗೆ ಕೂಡಿ ಕುಳಿತುಕೊಳ್ಳುವುದಲ್ಲ. ಸತ್ಯದ ಸಂಗ ಮಾಡುವುದು. ಸತ್ಯದ ಅರಿವು ಮೂಡಿದಾಗ ಮಾತ್ರ ಅನುಭವಕ್ಕೆ ಪರಮಾರ್ಥದ ಅರ್ಥ ತಿಳಿಯುತ್ತದೆ” ಎಂದು ಹೇಳಿದರು.ತಪಸ್ಸು, ಅನುಷ್ಠಾನ ಮತ್ತು ಸಿದ್ಧಿ ಪ್ರಾಪ್ತಿಯೇ ಜೀವನದ ಮೂಲ ಉದ್ದೇಶವಲ್ಲ. ಸರ್ವ ಜೀವಿಗಳಲ್ಲಿಯೂ ಸಮಾನತೆಯನ್ನು ಕಾಣುವುದು ಹಾಗೂ ಪ್ರತಿಯೊಬ್ಬರನ್ನೂ ಮಾನವೀಯ ದೃಷ್ಟಿಯಿಂದ ಕಾಣುವುದೇ ನಿಜವಾದ ಯೋಗವಾಗಿದೆ. ಮನುಷ್ಯ ಮನುಷ್ಯರ ನಡುವೆ ಭೇದಭಾವ ತೋರದೆ, ಪ್ರೀತಿ, ಸಹೋದರತ್ವ ಮತ್ತು ಸಮಾನತೆಯಿಂದ ಬದುಕಿದಾಗ ಮಾತ್ರ ನಿಜವಾದ ಆಧ್ಯಾತ್ಮಿಕ ಸಿದ್ಧಿಯತ್ತ ಸಾಗಲು ಸಾಧ್ಯ ಎಂದು ಭಕ್ತರಿಗೆ ತಿಳಿಸಿದರು.ಅಹಂಕಾರ, ದ್ವೇಷ, ಅಸೂಯೆ ಹಾಗೂ ಭೇದಭಾವಗಳನ್ನು ತೊರೆದು ಪರಸ್ಪರ ಪ್ರೀತಿ ಮತ್ತು ಸಹಬಾಳ್ವೆಯಿಂದ ಜೀವನ ನಡೆಸಬೇಕು. ಸಮಾಜದಲ್ಲಿ ಶಾಂತಿ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಸತ್ಸಂಗಗಳು ಮಹತ್ವದ ಪಾತ್ರ ವಹಿಸುತ್ತವೆ ಎಂದು ಶಿವನಾಥ ಮಹಾರಾಜರು ಹೇಳಿದರು.ಸನ್ಮಾರ್ಗದಲ್ಲಿ ನಡೆಯಬೇಕು: ನಾಮದೇವಗೌಡ ಶರಣರು ಅಂಭಾ ಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣರು ಮಾತನಾಡಿ, ಸ್ವಾಮೀ–ಜಿಗಳ ನುಡಿಮುತ್ತುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರತಿಯೊಬ್ಬರೂ ಸನ್ಮಾರ್ಗದಲ್ಲಿ ನಡೆಯಬೇಕು. ಇಂತಹ ಸತ್ಸಂಗ ಕಾರ್ಯಕ್ರಮಗಳು ಭಕ್ತರಲ್ಲಿ ಆಧ್ಯಾತ್ಮಿಕ ಜಾಗೃತಿ ಮೂಡಿಸುವಲ್ಲಿ ಸಹಕಾರಿಯಾಗುತ್ತವೆ ಎಂದು ಹೇಳಿದರು.ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಿವೃತ್ತ ತಹಶೀಲ್ದಾರ್ ವೆಂಕನಗೌಡ ಪಾಟೀಲ್ ವಹಿಸಿದ್ದರು. ನಾಗನಟಿ ಸಿದ್ಧರಾಮೇಶ್ವರ ಸ್ವಾಮೀಜಿ ಸೇರಿದಂತೆ ಗಣ್ಯರು ಉಪಸ್ಥಿತ–ರಿದ್ದರು.ಹಿರಿಯ ನ್ಯಾಯವಾದಿ ವಿ.ಎಂ. ಮೇಟಿ, ನಿವೃತ್ತ ಡಿಡಿಪಿಐ ಇಂದಿರಾ, ನಿವೃತ್ತ ಪಿಎಸ್‌ಐ ವೆಂಕಣ್ಣ, ವೀರಯ್ಯಸ್ವಾಮಿ, ಸೋಮಪ್ಪ ನಾಯಕ, ಲಿಂಗರಾಜ ಪಾಟೀಲ್, ಅಮರೇಶ ಪೋ.ಪಾ., ಬಸವ ರಾಮುಲು, ಅಯ್ಯನಗೌಡ, ಶಿವಪ್ಪ ಪಲಕನಮರಡಿ, ಚನ್ನಬಸವ ಮ್ಯಾಕಲದೊಡ್ಡಿ, ಹನುಮಣ್ಣ ಬಡಿಗೆಪ್ಪ, ಸಾಬುಗೌಡ ಪೋ.ಪಾಟೀಲ್, ಸಿದ್ದನಗೌಡ ಮಾಲಿ ಪಾಟೀಲ್, ದೇವನಗೌಡ ಮಾಲಿ ಪಾಟೀಲ್, ಮಾನಯ್ಯ, ಅಲಿಸಾಬ್, ಬಸವರಾಜ ಮಾತ್ವಳ್ಳಿ, ಬಸವರಾಜ ಚಿಕ್ಕಲ್, ಮುದುಕಪ್ಪ ಶರಣ, ಸಾಬಣ್ಣ ಶರಣರು, ಸಾಹುಕಾರ ರಂಗಣ್ಣ, ಚಿನ್ನಪ್ಪ ಹರಿಜನ, ರಂಗಪ್ಪ ಹರಿಜನ, ನಿಂಗಪ್ಪ ಬಾಗೂರು ಸೇರಿದಂತೆ ಮಠದ ಸದ್ಭಕ್ತರು, ಗ್ರಾಮದ ಹಿರಿಯರು, ಮಹಿಳಾ ಭಕ್ತ ಮಂಡಳಿಯವರು ಹಾಗೂ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ ನೂರಾರು ಭಕ್ತರು ಭಾಗವಹಿಸಿದ್ದರು.ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ವಧು– ವರ, ಪಾಲಕರ ಪರಿಚಯ ಕಾರ್ಯಕ್ರಮ

❏ ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಪಟ್ಟಣದ ಶ್ರೀ ಭಗೀರಥ ವಧು ವರರ ಉಚಿತ ಮಾಹಿತಿ ಕೇಂದ್ರದ ವತಿಯಿಂದ ಸರ್ವಧರ್ಮ ವಧು ವರರ ಪಾಲಕರ ಪರಿಚಯ ಕಾರ್ಯಕ್ರಮ ರವಿವಾರ ಪಟ್ಟಣದ ಶ್ರೀ ಬಾಲಾಜಿ ಸಭಾಭವನದಲ್ಲಿ ಜರುಗಿತು. ಈ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಸಿಎಂ ಹಿರೇಮಠ ಅವರು ಮಾತನಾಡಿ ಕಳೆದ 20 ವರ್ಷಗಳಿಂದ ಪಟ್ಟಣದಲ್ಲಿ ಶ್ರೀ ಭಗೀರಥ ವಧು–ವರ ಉಚಿತ ಮಾಹಿತಿ ಕೇಂದ್ರದವರು ಮಾಡುತ್ತಿರುವ ಕಲ್ಯಾಣದ ಕಾರ್ಯಗಳು ಶ್ಲಾಘನೀಯವಾಗಿವೆ ಎಂದು ಹೇಳಿದರು. ವರದಕ್ಷಿಣೆ ಪಿಡುಗಿನಿಂದಾಗಿ ಸಮಾಜದಲ್ಲಿ ಮದುವೆಗಳು ಕಷ್ಟ ಕಾರ್ಯಗಳಾಗಿವೆ. ಮದುವೆಗಳು ಸರಳವಾಗಿ ನೆರವೇರುವಂಥಾಗಲು ಇಂತಹ ವೇದಿಕೆಗಳನ್ನು ನಿರ್ಮಾಣ ಮಾಡಿ ಸಾಮೂಹಿಕ ಹಾಗೂ ಅಂತರ್ಜಾತಿ ವಿವಾಹಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ದಿವಂಗತ ಸುಭಾಸ ಯರಕ್ಯಾಳ ಅವರು ಆರಂಭಿಸಿದ ಈ ಕೇಂದ್ರವನ್ನು ಅವರ ಚಿರಂಜೀವಿಯಾದ ಸುನಿಲ್ ಅವರು ಬಹಳ ನಿಷ್ಠೆಯಿಂದ ನಡೆಸಿಕೊಂಡು ಹೋಗುತ್ತಿದ್ದಾರೆ ಅವರಿಗೆ ನಮ್ಮೆಲ್ಲರ ಸಹಕಾರದ ಅಗತ್ಯವಿದೆ ಎಂದರು. ವೇದಮೂರ್ತಿ ಮಲ್ಲಯ್ಯ ಹಿರೇಮಠ ಹಾಗೂ ಪಂಚಾಕ್ಷರಿ ಹಿರೇಮಠ ಅವರು ಮಾತನಾಡಿ ಸಂಬಂಧಗಳನ್ನು ಜೋಡಿಸುವುದು ಪುಣ್ಯದ ಕಾರ್ಯವಾಗಿದೆ ಆದರೆ ಇದರಲ್ಲಿ ವ್ಯಾಪಾರದ ಮನೋಭಾವ ಇರಬಾರದು. ವಧು–ವರ ಸೂಚಕರಾಗಿ ಕೆಲಸ ನಿರ್ವಹಿಸುತ್ತಿರುವವರು ಅತ್ಯಂತ ಪ್ರಾಮಾಣಿಕತೆಯಿಂದ ಕೆಲಸ ಮಾಡಲು ಪ್ರಯತ್ನಿಸಬೇಕು. ಇವತ್ತು ಪ್ರತಿಯೊಬ್ಬರು ಸರ್ಕಾರಿ ನೌಕರಿ ಮಾಡುವ ಹುಡುಗನನ್ನೇ ಆಯ್ಕೆ ಮಾಡಲು ಬಯಸುತ್ತಾರೆ ಇದು ಸರಿಯಲ್ಲ. ಸಣ್ಣ ಪುಟ್ಟ ಕೆಲಸ ಮಾಡುವ ಸಂಸ್ಕಾರಯುತ ಯುವಕರನ್ನೂ ಆಯ್ಕೆ ಮಾಡಬೇಕು. ನಮಗೆಲ್ಲರಿಗೂ ಅನ್ನ ನೀಡುವ ಅನ್ನದಾತನ ಮಗನಿಗೆ ಇವತ್ತು ಹೆಣ್ಣು ಕೊಡಲು ಯಾರೂ ಮುಂದೆ ಬರುತ್ತಿಲ್ಲ ಇದು ನಿಜಕ್ಕೂ ನೋವಿನ ಸಂಗತಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿ ಸುನಿಲ್ ಯರಕ್ಯಾಳ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಅವರಿಗೆ ಎಲ್ಲರೂ ಬೆಂಬಲವಾಗಿ ನಿಲ್ಲೋಣ ಎಂದರು.ವೇ.ಮೂ. ಸಿದ್ದಯ್ಯ ಸ್ವಾಮಿ ಮರೋಳ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಗಣ್ಯರಾದ ಕಾಶಿರಾಯಗೌಡ ದೇಸಾಯಿ (ಶಳ್ಳಗಿ), ಶ್ರೀ ಭಗೀರಥ ವಧು ವರರ ಕೇಂದ್ರದ ಗೌರವ ಅಧ್ಯಕ್ಷ ಬಸಯ್ಯ ಹಿರೇಮಠ, ಮಾದೇವಿ ಸುಭಾಸ ಯರಕ್ಯಾಳ, ಕಾರ್ಯದರ್ಶಿ ಸುನೀಲ ಯರಕ್ಯಾಳ, ಭರತ್ ಅಗರವಾಲ, ವಿಕ್ರಮ್ ಅಗರವಾಲ, ಅಧ್ಯಕ್ಷ ಶಿವಾಜಿ ಯಡ್ರಾಮಿ, ಶರಣಗೌಡ ಪಾಟೀಲ(ಕ–ರಿಭಾವಿ), ಖಜಾಂಚಿ ವೀರಭದ್ರ ಗಣಾಚಾರಿ, ಸಂಚಾಲಕ ಪೀರ ಮೊಹಮ್ಮದ್ ಖಾಜಿ, ಮೊಹಮ್ಮದ್ ಶಫೀಕ ಇನಾಮದಾರ, ಕಚೇರಿ ಸಹಾಯಕರಾದ ಪ್ರಕಾಶ ಬಬಲೇಶ್ವರ, ಪಾಂಡು ನನ್ನವರೆ, ವಿವಿಧ ಜಿಲ್ಲೆಗಳಿಂದ ಆಗಮಿಸಿದ ವಧು ವರರ ಪಾಲಕರು ಉಪಸ್ಥಿತರಿದ್ದರು.

ಕಂಪ್ಲಿಯಲ್ಲಿ ಶರಣ ಸಾಹಿತ್ಯ ಪರಿಷತ್ತಿನ 194 ನೇ ‘ಮಹಾಮನೆ’ ಕಾರ್ಯಕ್ರಮ ಸಂಪನ್ನ: ವಚನಗಳು ಮಾನವೀಯತೆಯ ದಾರಿದೀಪ ಎಂದ ಶ್ರೀನಿವಾಸ ಅಂಗಡಿ

❏ ನೈಜ್ಯ ದೆಸೆ ನ್ಯೂಸ್



ಬಳ್ಳಾರಿ / ಕಂಪ್ಲಿ: ‘ವಚನ ಸಾಹಿತ್ಯದಲ್ಲಿ ಅಡಗಿರುವ ಅರಿವು ಮತ್ತು ಅನುಭಾವದ ವಿಚಾರಗಳು ಇಂದಿನ ಆಧುನಿಕ ಸಮಾಜದ ಕಲ್ಮಶಗಳನ್ನು ತೊಳೆದು, ಮನುಷ್ಯನಲ್ಲಿ ಮಾನವೀಯ ಮೌಲ್ಯಗಳನ್ನು ಜಾಗೃತಗೊಳಿಸಲು ದಾ–ರಿದೀಪವಾಗಿವೆ’ ಎಂದು ಗಂಗಾವತಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷರು ಹಾಗೂ ಆದರ್ಶ ಶಿಕ್ಷಕರಾದ ಶ್ರೀನಿವಾಸ ಅಂಗಡಿ ಅವರು ಪ್ರತಿಪಾದಿಸಿದರು. ಅವರು ಪಟ್ಟಣದ ನಂ.10 ಮುದ್ದಾಪುರ ರಸ್ತೆಯ ವಿಜಯನಗರ ಕಾಲುವೆ ದಡದಲ್ಲಿರುವ ಮಡಿವಾಳ ಮಾಚಿದೇವ ಸಮುದಾಯ ಭವನದಲ್ಲಿ ಕಂಪ್ಲಿ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ 194ನೇ ‘ಮಹಾಮನೆ’ ಕಾರ್ಯಕ್ರಮದಲ್ಲಿ ‘ವಚನ ಸಾಹಿತ್ಯದ ಬೆಳಕಿನಲ್ಲಿ ಅರಿವು, ಅನುಭಾವ ಮತ್ತು ಮಾನವೀಯತೆ’ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿ ಮಾತನಾಡುತ್ತಿದ್ದರು. ತಮ್ಮ ಉಪನ್ಯಾಸವನ್ನು ಮುಂದುವರೆಸಿದ ಶ್ರೀನಿವಾಸ ಅಂಗಡಿ ಅವರು, "ಬಸವಾದಿ ಶರಣರ ವಚನಗಳು ಕೇವಲ ಸಾಹಿತ್ಯವಲ್ಲ, ಅವು ಬದುಕಿನ ಸತ್ಯಗಳು. ಅರಿವು ಎಂದರೆ ಕೇವಲ ಅಕ್ಷರ ಜ್ಞಾನವಲ್ಲ, ಅದು ತನ್ನನ್ನು ತಾನು ತಿಳಿಯುವುದು. ಈ ಅರಿವು ಅನುಭಾವವಾಗಿ ಬದಲಾದಾಗ ಮಾತ್ರ ಮನುಷ್ಯನಲ್ಲಿ ನೈಜ ಮಾನವೀಯತೆ ಮೊಳಕೆಯೊಡೆಯುತ್ತದೆ. ಇಂದಿನ ಯುವ ಪೀಳಿಗೆಗೆ ವಚನಗಳ ಸಂದೇಶವನ್ನು ತಲುಪಿಸುವ ಅಗತ್ಯವಿದೆ" ಎಂದು ಮಾರ್ಮಿಕವಾಗಿ ವಿವ–ರಿಸಿದರು.ಕಾರ್ಯಕ್ರಮದ ಉದ್ಘಾಟನೆಯನ್ನು ಮಡಿವಾಳ ಹುಲುಗಪ್ಪ ನೆರವೇರಿಸಿದರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಚಿಂತಕರಾದ ಕ. ಮಾ. ಹೆಮ್ಮಯ್ಯ ಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶರಣ ತತ್ವಗಳ ಪ್ರಸ್ತುತತೆಯನ್ನು ಶ್ಲಾಘಿಸಿದರು. ಮುಖ್ಯ ಅತಿಥಿಗಳಾಗಿ ಅಶೋಕ ಕುಕುನೂರ್ ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಬಸವರಾಜ, ಶಿಕ್ಷಕರಾದ ಚಂದ್ರಯ್ಯ ಸೊಪ್ಪಿಮಠ, ಡಾ. ಸುನಿಲ್, ರಮೇಶ ಸುಗ್ಗೆನಹಳ್ಳಿ, ಎಸ್. ಶ್ಯಾಮ ಸುಂದರ್, ಜ್ಯೋತಿ ಇಟಗಿ, ಮಡಿವಾಳ ಸಮಾಜದ ತಾಲೂಕು ಅಧ್ಯಕ್ಷ ಹುಲುಗಪ್ಪ, ಪರಿಷತ್ ಕಾರ್ಯಾಧ್ಯಕ್ಷ ಬಂಗಿ ದೊಡ್ಡ ಮಂಜುನಾಥ, ಪದಾಧಿಕಾ–ರಿಗಳಾದ ಎಸ್.ಡಿ.ಬಸವರಾಜ, ಎಚ್.ನಾಗರಾಜ, ಅಶೋಕ ಕುಕನೂರು, ಎಲಿಗಾರ ವೆಂಕಟರೆಡ್ಡಿ, ಕೆ.ಚಂದ್ರಶೇಖರ್, ಬಿ. ಎಂ. ರುದ್ರಯ್ಯ, ಬಡಿಗೇರ ಜಿಲಾನ್‌ಸಾಬ್, ಮರಿಶೆಟ್ರು ಸುರೇಶ್, ಶಂಕ್ರಪ್ಪ, ವಿರೂಪಾಕ್ಷಿ, ಡಿ.ಬಸವರಾಜ, ಎಂ.ವಿರೂಪಾಕ್ಷಿ, ಅಯ್ಯೋದಿ ಹನುಮಂತ, ಎಂ.ರಾಜಾ, ಎಂ.ರಾಘವೇಂದ್ರ, ಶರಣರು, ಗಣ್ಯರು ಹಾಗೂ ಸಾಹಿತ್ಯಾಸಕ್ತರು ಭಾಗವಹಿಸಿದ್ದರು. ವರದಿ : ಜಿಲಾನಸಾಬ್ ಬಡಿಗೇರ್

ಡಾ ಎಸ್ ಯತೀಂದ್ರ ಸಿದ್ರಾಮಯ್ಯ ಅಭಿಮಾನಿ ಬಳಗದ ವತಿಯಿಂದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿದ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ

❏ ನೈಜ್ಯ ದೆಸೆ ನ್ಯೂಸ್



ತಾಂಡವಪರ : ಬೆಂಗಳೂರು ದಕ್ಷಿಣ ಜಿಲ್ಲೆಯ ಶ್ರೀ ಡಾ. ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ವತಿಯಿಂದ ಜಿಲ್ಲೆಯ ಕುರುಬ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣ–ಕ್ಕೆ ಪ್ರೋತ್ಸಾಹ ನೀಡುವ ಸಲುವಾಗಿ ಚನ್ನಪಟ್ಟಣ ನಗರದ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನ ಮೈದಾನದ ಶತಮಾನೋತ್ಸವ ಭವನದಲ್ಲಿ ಏರ್ಪಡಿಸಿದ್ದ 2 ನೇ ವರ್ಷದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ನಗರಾಭಿವೃದ್ಧಿ ಸಚಿವರು ಆದ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಭಾಗವಹಿಸಿ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರೋತ್ಸಾಹ ನೀಡಿ ಗೌರವಿಸಿ ಸನ್ಮಾನಿಸಿದರುಬಳಿಕ ಸಚಿವರು ಸಮಾರಂಭದಲ್ಲಿ ಮಾತನಾಡುತ್ತಾ ಶಿಕ್ಷಣ ಎನ್ನುವುದು ಕೇವಲ ವೈಯಕ್ತಿಕ ಬೆಳವಣಿಗೆಗೆ ಸೀಮಿತವಾಗದೆ, ಸಮಗ್ರ ಸಮುದಾಯದ ಅಭಿವೃದ್ಧಿಗೆ ಬಳಕೆಯಾಗಬೇಕು ಆ ದಿಕ್ಕಿನಲ್ಲಿ ಸಮುದಾಯದ ವಿದ್ಯಾರ್ಥಿಗಳು ಹೆಚ್ಚು ಶ್ರಮವಹಿಸಿ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಎಂದು ಸಲಹೆ ನೀಡಿದರುಪ್ರತಿಯೊಬ್ಬರಿಗೂ ಸಮಾನತೆ ಮತ್ತು ನ್ಯಾಯ ಸಿಗುವ ಶೋಷಣೆರಹಿತ ಸಮಾಜ ನಿರ್ಮಾಣಕ್ಕಾಗಿ ನಾವೆಲ್ಲರೂ ಒಂದಾಗಿ ಸಂಘಟಿ–ತರಾಗಿ ಹೋರಾಡೋಣ ಎಂದು ತಿಳಿಸಿದ ಸಚಿವರುಸಮಾಜದಲ್ಲಿ ಬೇರೂರಿರುವ ಜಾತಿ ವ್ಯವಸ್ಥೆಯನ್ನು ಬುಡಮೇಲು ಮಾಡಿ, ಎಲ್ಲಾ ಹಿಂದುಳಿದ ವರ್ಗಗಳು, ಶೋಷಿತರು ಹಾಗೂ ದಮನಿತರು ಸಮಾಜದ ಮುಖ್ಯವಾಹಿನಿಗೆ ಬರಬೇಕಿದೆ. ಇದು ಸಾಧ್ಯವಾಗುವುದು ಗುಣಮಟ್ಟದ ಶಿಕ್ಷಣ ಮತ್ತು ಸಮಾನ ಅವಕಾಶಗಳಿಂದ ಮಾತ್ರ. ಸಾಧ್ಯ ಎಂದು ಹೇಳಿದ ಅವರು ಅವಕಾಶವಂಚಿತರಿಗೆ ನ್ಯಾಯಯುತ ಅವಕಾಶಗಳು ಸಿಗುವಂತೆ ಧ್ವನಿಯೆತ್ತುವುದು ಮತ್ತು ಹಿಂದುಳಿದವರ ಹಿತಾಸಕ್ತಿಗಾಗಿ ನಿರಂತರವಾಗಿ ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ಹೇಳಿದರು ಪ್ರತಿಭಾ ಪುರಸ್ಕಾರ ಪಡೆದ ಮಕ್ಕಳನ್ನು ಅಭಿನಂದಿಸಿ,ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಅವರ ಶಿಕ್ಷಣಕ್ಕೆ ಉತ್ತೇಜನ ನೀಡುತ್ತಿರುವ ಸಚಿವ ಡಾ. ಎಸ್ ಯತೀಂದ್ರ ಸಿದ್ದರಾಮಯ್ಯ ಅಭಿಮಾನಿ ಬಳಗದ ಈ ಕಾರ್ಯವೈಕ–ರಿಗೆ ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿದರುಈ ಸಂದರ್ಭದಲ್ಲಿ ಚನ್ನಪಟ್ಟಣ ಕ್ಷೇತ್ರದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀಯುತ ಸಿ.ಪಿ. ಯೋಗೇಶ್ವರ್. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷರಾದ ಹೆಚ್. ಎಂ. ರೇವಣ್ಣ. ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟ ಪೂರ್ವ ರಾಜ್ಯಾಧ್ಯಕ್ಷರಾದ ಬಿ, ಸುಬ್ರಮಣ್ಯ, ನಾಯಕ ನಟರು ಹಾಗೂ ಸಾಹಸ ನಿರ್ದೇಶಕರಾದ ಅಪ್ಪು ವೆಂಕಟೇಶ್, ಹಾಗೂ ಚನ್ನಪಟ್ಟಣ, ರಾಮನಗರ, ಮಾಗಡಿ, ಕನಕಪುರ ತಾಲೂಕುಗಳ ಕುರುಬ ಸಂಘದ ಪದಾಧಿಕಾರಿಗಳು ಹಾಗೂ ಸಮುದಾಯದ ಮುಖಂಡರು ಹಾಗೂ ಪ್ರತಿಭಾ ಪುರಸ್ಕಾರ ಸನ್ಮಾನಿತರು ಭಾಗವಹಿಸಿದ್ದರು.

ವಚನ ದರ್ಶನ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ ಎನ್ನ ಶಿರವ ಸೋರೆಯ ಮಾಡಯ್ಯಾ ಎನ್ನ ನರವ ತಂತಿಯ ಮಾಡಯ್ಯಾ, ಎನ್ನ ಬೆರಳ ಕಡ್ಡಿಯ ಮಾಡಯ್ಯಾ ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,ಕೂಡಲಸಂಗಮದೇವಾ

12 ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಅತ್ಯಂತ ಪ್ರಸಿದ್ಧವಾದ ಹಾಗೂ ಸುಂದರವಾದ ವಚನವಾಗಿದೆ. ಈ ವಚನದಲ್ಲಿ ವಿಶ್ವಗುರು ಬಸವಣ್ಣನವರು ತಮ್ಮ ಸಂಪೂರ್ಣ ದೇಹವನ್ನು ದೇವರ ಸೇವೆಗೆ ಅರ್ಪಿಸಿಕೊಳ್ಳುವಂತೆ ಮತ್ತು ದೇವನೇ ಅದನ್ನು ನುಡಿಸುವಂತೆ ಬೇಡಿಕೊಂಡಿದ್ದಾರೆ.ಈ ವಚನದಲ್ಲಿ ಬಸವಣ್ಣನವರು ತಮ್ಮನ್ನು ತಾವು ದೇವರ ಕೈಯಲ್ಲಿರುವ 'ದಂಡಿಗೆ' ಇಂದಿನ ವೀಣೆಯಂತಹ ಒಂದು ತಂತಿ ವಾದ್ಯ ಮಾಡಲು ಕೇಳಿಕೊಳ್ಳುತ್ತಿದ್ದಾರೆ.ದೇಹ ಮತ್ತು ಶಿರ ನನ್ನ ದೇಹವನ್ನು ವಾದ್ಯದ ದಂಡವನ್ನಾಗಿಯೂ, ನನ್ನ ತಲೆಯನ್ನು ವಾದ್ಯಕ್ಕೆ ಬಳಸುವ ಒಣ–ಗಿದ ಸೋರೆಕಾಯಿಯ ಬುರುಡೆಯನ್ನಾಗಿಯೂ ಮಾಡು.ನರ ಮತ್ತು ಬೆರಳು: ನನ್ನ ದೇಹದ ನರಗಳನ್ನು ಆ ವಾದ್ಯದ ತಂತಿಗಳನ್ನಾಗಿ ಮಾಡು ಮತ್ತು ನನ್ನ ಬೆರಳುಗಳನ್ನೇ ಅದನ್ನು ನುಡಿಸುವ ಕಡ್ಡಿಯನ್ನಾಗಿ ಪರಿವರ್ತಿಸು.ಸಂಗೀತದ ನಾದ: ಹೇ ಕೂಡಲಸಂಗಮದೇವ, ನನ್ನನ್ನು ನಿನ್ನ ಎದೆಗೆ ಒತ್ತಿ ಹಿಡಿದು, ನಿನಗೆ ಇಷ್ಟ ಬಂದಂತೆ ಮೂವತ್ತೆರಡು ಬತ್ತೀಸ ರಾಗಗಳನ್ನು ಮಂಜುಳವಾಗಿ ನುಡಿಸು. ನನ್ನ ಜೀವನದ ಪ್ರತಿ ಕ್ಷಣವೂ ನಿನ್ನ ನಾದಮಯವಾಗಿರಲಿ ಎಂಬುದು ಇದರ ಆಶಯವಾಗಿದೆ.ಅಂದರೆ, "ನನ್ನಲ್ಲಿ ಯಾವುದೇ ಅಹಂಕಾರ ಉಳಿಯಬಾರದು, ನಾನು ಸಂಪೂರ್ಣವಾಗಿ ನಿನ್ನ ಇಚ್ಛೆಯಂತೆ ನಡೆಯುವ ನಿಮಿತ್ತ ಮಾತ್ರನಾಗಬೇಕು" ಎಂಬ ಪರಮ ಭಕ್ತಿಯ ಶರಣಾಗತಿಯ ಭಾವ ಇಲ್ಲಿದೆ. ಇಂಥಹ ವಚನಗಳು ಮನುಕುಲಕ್ಕೆ ದಾರಿದೀಪವಾಗಿವೆ. ನಾವು ನೀವು ವಚನದ ದಾರಿಯಲ್ಲಿ ಸಾಗೋಣ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ತಾಯಿ ಮಕ್ಕಳ ಆರೈಕೆ ಸದಾ ನಿಗಾವಹಿಸಿ, ಗುಣಮಟ್ಟದ ಸೇವೆ ನಮ್ಮ ಧ್ಯೇಯವಾಗಿರಲಿ:ಡಾ ರಜನಿ ಎಮ್.

❏ ನೈಜ್ಯ ದೆಸೆ ನ್ಯೂಸ್



ರಾಯಚೂರು,ಸಾರ್ವಜನಿಕರಿಗೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ನೀಡುವಲ್ಲಿ ಯಾವುದೇ ರಾಜಿಯಾಗದಂತೆ ಕರ್ತವ್ಯ ನಿರ್ವಹಿಸಿ ಎಂದು ನಿರ್ದೇಶಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ಬೆಂಗಳೂರು, ಡಾ ರಜನಿ ಎಮ್ ತಿಳಿಸಿದರು. ರಾಯಚೂರು ಜಿಲ್ಲೆಯ ಪ್ರವಾಸದ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರ ಗುಂಜಳ್ಳಿ, ರಾಯಚೂರಿನ ತಾಯಿ ಮಕ್ಕಳ ಆಸ್ಪತ್ರೆ, ಹಾಗೂ ಜಿಲ್ಲಾ ಔಷಧಿ ಉಗ್ರಾಣಕ್ಕೆ ಬೇಟಿ ನೀಡಿದರು. ಆಸ್ಪತ್ರೆಯ ಹೆರಿಗೆ ಕೊಠಡಿ, ಹೆರಿಗೆ ವಾರ್ಡ್, ಔಷಧಿ ವಿಭಾಗ, ಪ್ರಯೋಗಾಲಯ, ಸೇರಿದಂತೆ ವಿವಿಧ ವಿಭಾಗಗಳನ್ನು ಪರಿಶೀಲಿಸಿ ಆಸ್ಪತ್ರೆಗೆ ಆಗಮಿಸಿದ ಸಾರ್ವಜನಿಕರು, ತಾಯಂದಿರನ್ನು ಮಾತನಾಡಿಸಿ ಆಸ್ಪತ್ರೆಯಲ್ಲಿ ಒದಗಿಸುವ ಸೇವೆಗಳ ಬಗ್ಗೆ ಚರ್ಚಿಸಿದರು ಹಾಗೂ ತಾಯಿ ಮಗುವಿನ ಆರೈಕೆಗೆ ಹೆಚ್ಚಿನ ಒತ್ತು ನೀಡುವಂತೆ ಹಾಗೂ ಅಸ್ಪತ್ರೆಗೆ ಆಗಮಿಸುವ ಪ್ರತಿಯೊಬ್ಬರೊಂದಿಗೂ ಸೌಜನ್ಯಯುತವಾಗಿ ನಡೆದುಕೊಂಡು ಚಿಕಿತ್ಸೆ ನೀಡಲು ಹಾಗೂ ಆಸ್ಪತ್ರೆಯ ಹೊರ ಮತ್ತು ಒಳ ಆವರಣವನ್ನು ಸದಾ ಶುಚಿತ್ವದಿಂದ ಕಾಪಾಡುವಂತೆ ಸೂಚಿಸಿದರು. ಇದೆ ವೇಳೆ ಜಿಲ್ಲಾ ಆರೋಗ್ಯ ತರಬೇತಿ ಕೇಂದ್ರದ ಸ್ಕಿಲ್‌ಲ್ಯಾಬ್‌ಗೆ ಬೇಟಿ ನೀಡಿ ಹೆರಿಗೆಯ ನಿರ್ವಹಣೆಯ ತಾಂತ್ರಿಕ ಕೌಶಲ್ಯದ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್, ಜಿಲ್ಲಾ ತರಬೇತಿ ಕೇಂದ್ರದ ಪ್ರಾಂಶುಪಾಲರು ಡಾ ಸುರೇಂದ್ರಬಾಬು, ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ, ಡಿಎಫ್‌ಡಬ್ಲ್ಯುಓ ಡಾ ಶಿವಕುಮಾರ್ ನಾರಾ, ಡಿಟಿಓ ಡಾ ಯಶೋಧಾ, ಕೆಸೆಪ್ಸ್‌ನ ಹಿರಿಯ ಫಾರ್ಮಸಿ ಅಧಿಕಾರಿ ವಿಜಯಲಕ್ಷ್ಮೀ, ತಾಲೂಕಾ ಆರೋಗ್ಯಾಧಿಕಾರಿ ಡಾ ಸತೀಶ್ ಕೆ, ನಿರ್ದೇಶನಾಲಯದ ಕಛೇರಿ ಅಧಿಕ್ಷಕ ಪಿ ಎಮ್, ರಮೇಶ್ ಸೇರಿದಂತೆ ಆಡಳಿತ ವೈದ್ಯಾಧಿಕಾರಿಗಳು, ತಜ್ಞ ವೈದ್ಯರು, ಸಿಬ್ಬಂದಿಯವರು ಇತರರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಯ ಶಿಕ್ಷಕಿ ಝುರೀನಾ ಅವರಿಗೆ 'ನೇಷನ್ ಬಿಲ್ಡರ್ ಅವಾರ್ಡ್'

ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಸಲ್ಲಿಸಿದ ಸೇವೆಗೆ ರೋಟರಿ ಕ್ಲಬ್‌ನಿಂದ ಗೌರವ

❏ ನೈಜ್ಯ ದೆಸೆ ನ್ಯೂಸ್



ರಾಯಚೂರು: ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಪ್ರತಿಭೆ, ಆತ್ಮವಿಶ್ವಾಸ ಹಾಗೂ ಸಾಮಾಜಿ–ಕ ಜವಾಬ್ದಾರಿಯನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದೆ. ಇಂತಹ ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರೋಟರಿ ಸಂಸ್ಥೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಗೌರವಿಸುತ್ತಿದೆ. ಈ ಹಿನ್ನೆಲೆಯಲ್ಲಿ ರೋಟರಿ ಕ್ಲಬ್ ರಾಯಚೂರು ಈಸ್ಟ್ ವತಿಯಿಂದ ನೀಡಲಾಗುವ ಜಿಲ್ಲಾ ಮಟ್ಟದ ಪ್ರತಿಷ್ಠಿತ **'ನೇಷನ್ ಬಿಲ್ಡರ್ ಅವಾರ್ಡ್'**ಗೆ ಮಾನ್ವಿ ತಾಲೂಕಿನ ಮುಷ್ಟೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥ–ಮಿಕ ಶಾಲೆಯ ಸಹ ಶಿಕ್ಷಕಿ ಝುರೀನಾ ಅವರು ಭಾಜನರಾಗಿದ್ದಾರೆ.ರಾಯಚೂರು ನಗರದ ಕೃಷಿ ವಿಶ್ವವಿದ್ಯಾಲಯದ ಸಿಲ್ವರ್ ಜುಬಿಲಿ ಹಾಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಝುರೀನಾ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಶಿಕ್ಷಣ ಕ್ಷೇತ್ರದಲ್ಲಿ ಅವರು ಸಲ್ಲಿಸುತ್ತಿರುವ ಸೇವೆ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಕೈಗೊಂಡಿರುವ ವಿವಿಧ ಪ್ರಯತ್ನಗಳು ಹಾಗೂ ಬೋಧನಾ ಚಟುವಟಿಕೆಗಳಲ್ಲಿ ತೋ–ರಿಸಿರುವ ಸೃಜನಶೀಲತೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ.ಶಿಕ್ಷಕಿ ಝುರೀನಾ ಅವರು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ವಿಶೇಷ ಆದ್ಯತೆ ನೀಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೇವಲ ಪಠ್ಯಪುಸ್ತಕದ ವಿಷಯಗಳಿಗೆ ಸೀಮಿತವಾಗದೆ, ವಿದ್ಯಾರ್ಥಿಗಳು ವಿಷಯಗಳನ್ನು ಸುಲಭವಾಗಿ ಅರ್ಥೈಸಿಕೊಳ್ಳುವಂತೆ ವಿವಿಧ ಬೋಧನಾ ವಿಧಾನಗಳನ್ನು ಬಳಸಿಕೊಂಡು ಕಲಿಕೆಯನ್ನು ಪರಿಣಾಮಕಾರಿಯಾಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರಿಗೆ ಸೂಕ್ತ ವೇದಿಕೆ ಕಲ್ಪಿಸುವ ಮೂಲಕ ಆತ್ಮವಿಶ್ವಾಸ ಬೆಳೆಸುವಲ್ಲಿಯೂ ಅವರು ಆಸಕ್ತಿ ವಹಿಸಿದ್ದಾರೆ.ವಿದ್ಯಾರ್ಥಿಗಳ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಪಾಠೋಪಕರಣಗಳ ಬಳಕೆ ಮತ್ತು ತಯಾರಿಕೆಗೆ ಅವರು ನೀಡುತ್ತಿರುವ ಒತ್ತು ಗಮನಾರ್ಹವಾಗಿದೆ. ಬೋಧನಾ ವಿಷಯಗಳನ್ನು ಮಕ್ಕಳಿಗೆ ಸರಳವಾಗಿ ಹಾಗೂ ಆಸಕ್ತಿದಾಯಕವಾಗಿ ತಲುಪಿಸುವ ಉದ್ದೇಶದಿಂದ ವಿವಿಧ ಪಾಠೋಪಕರಣಗಳನ್ನು ರೂಪಿಸಿ ಬಳಸಿರುವುದು ಅವರ ಶೈಕ್ಷಣಿಕ ಕಾರ್ಯವೈಖರಿಯ ವಿಶೇಷತೆಯಾಗಿದೆ. ಇದೇ ಹಿನ್ನೆಲೆಯಲ್ಲಿ ಅವರು ರಾಜ್ಯ ಮಟ್ಟದ ಪಾಠೋಪಕರಣಗಳ ತಯಾರಿಕೆ ಸ್ಪರ್ಧೆಯಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿರುವುದು ಪ್ರಶಸ್ತಿಗೆ ಪರಿಗಣಿಸಲಾದ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಲ್ಲಿಯೂ ಉತ್ತಮ ಪ್ರತಿಭೆ ಹಾಗೂ ಸೃಜನಶೀಲತೆ ಅಡಗಿದೆ. ಸೂಕ್ತ ಮಾರ್ಗದರ್ಶನ ಮತ್ತು ಪ್ರೋತ್ಸಾಹ ದೊರೆತರೆ ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಬಹುದು ಎಂಬ ನಂಬಿಕೆಯೊಂದಿಗೆ ಝುರೀನಾ ಅವರು ವಿದ್ಯಾರ್ಥಿಗಳೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಮಕ್ಕಳ ಕಲಿಕೆಯ ಮಟ್ಟವನ್ನು ಅರ್ಥಮಾಡಿಕೊಂಡು, ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ಬೋಧನಾ ಚಟುವಟಿಕೆಗಳನ್ನು ರೂಪಿಸುವ ಮೂಲಕ ಶಿಕ್ಷಣವನ್ನು ಮಕ್ಕಳಿಗೆ ಹೆಚ್ಚು ಆಕರ್ಷಕವಾಗಿಸುವ ಪ್ರಯತ್ನ ನಡೆಸುತ್ತಿದ್ದಾರೆ.'ನೇಷನ್ ಬಿಲ್ಡರ್' ಎಂಬ ಹೆಸರೇ ಸೂಚಿಸುವಂತೆ, ಶಿಕ್ಷಕರು ದೇಶದ ಭವಿಷ್ಯ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಶಾಲೆಯಲ್ಲಿ ಶಿಕ್ಷಕರು ನೀಡುವ ಜ್ಞಾನ, ಮೌಲ್ಯಗಳು, ಶಿಸ್ತು ಹಾಗೂ ಮಾರ್ಗದರ್ಶನವು ವಿದ್ಯಾರ್ಥಿಗಳ ಮುಂದಿನ ಜೀವನದ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿ ಉತ್ತಮ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರನ್ನು ಗುರುತಿಸಿ ಗೌರವಿಸುವುದು ಇತರ ಶಿಕ್ಷಕರಿಗೂ ಪ್ರೇರಣೆಯಾಗುತ್ತದೆ. ಝುರೀನಾ ಅವರಿಗೆ ದೊರೆತಿರುವ ಈ ಪ್ರಶಸ್ತಿಯೂ ಸರ್ಕಾರಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಮತ್ತಷ್ಟು ಉತ್ಸಾಹ ನೀಡುವಂತಾಗಿದೆ.ಸಮಾರಂಭದಲ್ಲಿ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ. ಚನ್ನಬಸವಯ್ಯ ಹಿರೇಮಠ ಅವರು ಉಪಸ್ಥಿತರಿದ್ದು, ಶಿಕ್ಷಕಿ ಝು–ರೀನಾ ಅವರ ಸಾಧನೆಯನ್ನು ಅಭಿನಂದಿಸಿದರು. ರೋಟರಿ ಕ್ಲಬ್‌ನ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಪದಾಧಿಕಾರಿಗಳಾದ ಕೆ. ಚಂದ್ರಕಾಂತ, ಕೆ. ಲಕ್ಷ್ಮಿಕಾಂತ್ ರೆಡ್ಡಿ, ಎಂ. ರಂಗಲಿಂಗನಗೌಡ, ಎಸ್. ಚೇತನ್ ಕುಮಾರ್, ಡಾ. ಕೆ. ಪ್ರಮೋದ್ ಕುಮಾರ್ ಹಾಗೂ ಪಿ. ಚಂದ್ರಶೇಖರ ಸೇ–ರಿದಂತೆ ರೋಟರಿ ಕ್ಲಬ್‌ನ ಪದಾಧಿಕಾರಿಗಳು, ಶಿಕ್ಷಕರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.ಪ್ರಶಸ್ತಿ ಸ್ವೀಕರಿಸಿದ ಶಿಕ್ಷಕಿ ಝು–ರೀನಾ ಅವರಿಗೆ ಮುಷ್ಟೂರು ಗ್ರಾಮದ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಗ್ರಾಮಸ್ಥರಿಂದ ಅಭಿನಂದನೆಗಳು ವ್ಯಕ್ತವಾಗಿವೆ. ಈ ಗೌರವವು ತಮ್ಮ ಶೈಕ್ಷಣಿಕ ಸೇವೆಗೆ ಮತ್ತಷ್ಟು ಪ್ರೇರಣೆ ನೀಡಿದ್ದು, ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವ ಸಂಕಲ್ಪವನ್ನು ಬಲಪಡಿಸಿದೆ.

ಹಡಪದ ಅಪ್ಪಣ್ಣ ಸಮಾಜದ ಕಾಯಕ ಬಂಧುಗಳಿಗೆ ಸಾಲ ಸೌಲಭ್ಯ ಕಲ್ಪಿಸಿ: ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್.

❏ ನೈಜ್ಯ ದೆಸೆ ನ್ಯೂಸ್



ಕಲಬುರಗಿ: ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಮೂಲಕ ಈ ಹಿಂದೆ ಹಡಪದ ಅಪ್ಪಣ್ಣ ಕ್ಷೌರಿಕ ಸಮಾಜದ ಕಾಯಕ ಬಂಧುಗಳು ಆರ್ಥಿಕ ನೆರವು ಹಾಗೂ ಸಾಲ ಸೌಲಭ್ಯ ಪಡೆಯುತ್ತಿದ್ದರು. ಆದರೆ ಪ್ರಸ್ತುತ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮುಂದಾದ ನಮ್ಮ ಸಮಾಜದ ಅನೇಕ ಕಾಯಕ ಬಂಧುಗಳಿಗೆ ಅರ್ಜಿ ಸಲ್ಲಿಸುವ ಅವಕಾಶ ಸಿಗುತ್ತಿಲ್ಲ ಎಂಬ ದೂರುಗಳು ಕೇಳಿಬರುತ್ತಿವೆ.ಬಡತನದ ನಡುವೆಯೂ ಕ್ಷೌರಿಕ ವೃತ್ತಿಯನ್ನು ಕಾಯಕವನ್ನಾಗಿ ಮಾಡಿಕೊಂಡು ಕುಟುಂಬ ನಿರ್ವಹಣೆ ಮಾಡುತ್ತಿರುವ ಹಡಪದ ಅಪ್ಪಣ್ಣ ಸಮಾಜದ ಬಂಧುಗಳಿಗೆ ಸ್ವಯಂ ಉದ್ಯೋಗ ಸಾಲ ಮತ್ತು ಆರ್ಥಿಕ ನೆರವು ಅತ್ಯಂತ ಅಗತ್ಯವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಿ ಸಾಲ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವೇ ದೊರೆಯದಿದ್ದರೆ, ಸಣ್ಣ ಕಾಯಕ ಸಮಾಜದ ಆರ್ಥಿಕ ಅಭಿವೃದ್ಧಿ ಹೇಗೆ ಸಾಧ್ಯ ಎಂಬ ಪ್ರಶ್ನೆ ಎದುರಾಗುತ್ತದೆ ಎಂದು ಕಲಬುರಗಿ ಜಿಲ್ಲೆಯ ಹಡಪದ ಅಪ್ಪಣ್ಣ ಸಮಾಜದ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಹಾಗೂ ಸಮಾಜದ ಸೇವಕ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್. ಪ್ರಶ್ನಿಸಿದ್ದಾರೆ.ಹಡಪದ ಅಪ್ಪಣ್ಣ ಸಮಾಜದ ಅಭಿವೃದ್ಧಿಗಾಗಿ ನಿಗಮ ಮಂಡಳಿ ಘೋಷಣೆಯಾಗಿದ್ದರೂ, ಸಮಾಜದ ಕಾಯಕ ಬಂಧುಗಳಿಗೆ ಅಗತ್ಯವಾದ ಆರ್ಥಿಕ ನೆರವು ಹಾಗೂ ಯೋಜನೆಗಳ ಅನುಷ್ಠಾನ ಪರಿಣಾಮಕಾರಿಯಾಗಿ ತಲುಪಬೇಕು. ನಿಗಮಕ್ಕೆ ಸಮರ್ಪಕ ಅನುದಾನ ಮತ್ತು ಯೋಜನಾ ಸೌಲಭ್ಯಗಳು ದೊರೆಯದಿದ್ದರೆ, ಆರ್ಥಿಕವಾಗಿ ಹಿಂದುಳಿದ ಸಣ್ಣ ಕಾಯಕ ಸಮಾಜಗಳ ಅಭಿವೃದ್ಧಿ ಕುಂಠಿತವಾಗುತ್ತದೆ ಎಂದು ಅವರು ತಿಳಿಸಿದ್ದಾರೆ. ಹಡಪದ ಅಪ್ಪಣ್ಣ ಸಮಾಜದ ಕಾಯಕ ಬಂಧುಗಳು ಡಿ. ದೇವರಾಜ ಅರಸು ನಿಗಮದ ಮೂಲಕ ಸಾಲ ಪಡೆಯಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ತಕ್ಷಣ ಅವಕಾಶ ಕಲ್ಪಿಸಬೇಕು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಾಗುತ್ತಿರುವ ತಾಂತ್ರಿಕ ಅಥ–ವಾ ಅರ್ಹತಾ ಸಮಸ್ಯೆಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕು. ಅರ್ಹ ಫಲಾನುಭವಿಗಳ ಅರ್ಜಿಗಳನ್ನು ಸ್ವೀಕರಿಸಿ, ನಿಯಮಾನುಸಾರ ಸಾಲ ಮತ್ತು ಆರ್ಥಿಕ ನೆರವು ಒದಗಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ. ಹಡಪದ ಅಪ್ಪಣ್ಣ ಸಮಾಜದ ಬಡ ಕ್ಷೌರಿಕ ಕುಟುಂಬಗಳಿಗೆ ಸರ್ಕಾರವೇ ಆಧಾರವಾಗಬೇಕು. ಸಣ್ಣ ಕಾಯಕ ಸಮಾಜಗಳ ಆರ್ಥಿಕ ಸ್ವಾವಲಂಬನೆಗಾಗಿ ವಿಶೇಷ ಗಮನ ಹರಿಸಿ, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಸೂಕ್ತ ಸಾಲ ಸೌಲಭ್ಯ ಹಾಗೂ ಅನುದಾನ ಒದಗಿಸಬೇಕು ಎಂದು ರಾಜ್ಯ ಸರ್ಕಾರ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕಲಬುರಗಿ ಜಿಲ್ಲಾಡಳಿತಕ್ಕೆ ಹಡಪದ ಸಮಾಜದ ಸೇವಕರಾದ ಮಲ್ಲಿಕಾರ್ಜುನ ಬಿ. ಹಡಪದ ಸುಗೂರ ಎನ್ ಮನವಿ ಮಾಡಿದ್ದಾರೆ.

ಪೂಜ್ಯ ಸಿದ್ಧಬಸವ ಮಹಾಸ್ವಾಮಿಜಿ ಅವರಿಂದ ಬಸನಗೌಡ ಬಾದರ್ಲಿ ಅವರಿಗೆ ಆತ್ಮೀಯ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್



ಸಿಂಧನೂರು: ಸುಕ್ಷೇತ್ರ ಬಳಗಾನೂರಿನ ಪೂಜ್ಯ ಶ್ರೀ ಮ.ನಿ.ಪ್ರ.ಸ್ವ. ಸಿದ್ಧಬಸವ ಮಹಾಸ್ವಾಮಿಗಳು ಇಂದು ಸಿಂಧನೂರಿನ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಅವರ ಕಚೇರಿಗೆ ಆಗಮಿಸಿ, ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಿದರು.ಪೂಜ್ಯ ಶ್ರೀಗಳು ಕಚೇರಿಗೆ ಆಗಮಿಸಿದ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರು ಗೌರವಪೂರ್ವಕವಾಗಿ ಸ್ವಾಗತಿಸಿ, ಶ್ರೀಗಳ ಆಶೀರ್ವಾದ ಪಡೆದುಕೊಂಡರು. ಬಳಿಕ ನಡೆದ ಆತ್ಮೀಯ ಭೇಟಿಯಲ್ಲಿ ವಿವಿಧ ಸಾಮಾಜಿಕ, ಧಾರ್ಮಿಕ ಹಾಗೂ ಸಾರ್ವಜನಿಕ ವಿಚಾರಗಳ ಕುರಿತು ಪೂಜ್ಯ ಶ್ರೀಗಳೊಂದಿಗೆ ಚರ್ಚೆ ನಡೆಸಿದರು.ಸಮಾಜದಲ್ಲಿ ಧಾರ್ಮಿಕ ಮತ್ತು ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಮಠಾಧೀಶರು ಹಾಗೂ ಪೂಜ್ಯರ ಮಾರ್ಗದರ್ಶನ ಮಹತ್ವದ ಪಾತ್ರ ವಹಿಸುತ್ತದೆ. ಹಿರಿಯರ ಆಶೀರ್ವಾದ, ಮಾರ್ಗದರ್ಶನ ಮತ್ತು ಅನುಭವವು ಸಾರ್ವಜನಿಕ ಜೀವನದಲ್ಲಿ ಸೇವೆ ಸಲ್ಲಿಸುವವರಿಗೆ ಸದಾ ಪ್ರೇರಣೆಯಾಗಿದೆ ಎಂಬ ಅಭಿಪ್ರಾಯವನ್ನು ಬಸನಗೌಡ ಬಾದರ್ಲಿ ಅವರು ವ್ಯಕ್ತಪಡಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಪೂಜ್ಯ ಸಿದ್ಧಬಸವ ಮಹಾಸ್ವಾಮಿಗಳ ಆಶೀರ್ವಾದ ಮತ್ತು ಮಾರ್ಗದರ್ಶನ ನಮಗೆ ಸದಾ ಶಕ್ತಿ ಹಾಗೂ ಪ್ರೇರಣೆಯಾಗಿದೆ. ಸಮಾಜದ ಒಳಿತಿಗಾಗಿ, ಜನರ ಶ್ರೇಯೋಭಿವೃದ್ಧಿಗಾಗಿ ಇನ್ನಷ್ಟು ಉತ್ತಮ ಕಾರ್ಯಗಳನ್ನು ಕೈಗೊಳ್ಳಲು ಪೂಜ್ಯರ ಆಶೀರ್ವಾದ ಸದಾ ನಮ್ಮೊಂದಿಗೆ ಇರಲಿ" ಎಂದು ಹೇಳಿದರು.ಅವರು ಮುಂದುವರಿದು, "ಪೂಜ್ಯರ ಸಾನ್ನಿಧ್ಯ ಮತ್ತು ಆಶೀರ್ವಾದವು ನಮ್ಮಲ್ಲಿ ಸೇವಾ ಮನೋಭಾವವನ್ನು ಮತ್ತಷ್ಟು ಬಲಪಡಿಸುತ್ತದೆ. ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ಸಹಬಾಳ್ವೆ ಮತ್ತು ಮಾನವೀಯ ಮೌಲ್ಯಗಳು ಸದೃಢವಾಗಲು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದ ಹಿರಿಯರ ಮಾರ್ಗದರ್ಶನ ಅತ್ಯಂತ ಅಗತ್ಯ" ಎಂದು ತಿಳಿಸಿದರು.ಭೇಟಿಯ ಸಂದರ್ಭದಲ್ಲಿ ಸುಕ್ಷೇತ್ರ ಬಳಗಾನೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳ ಧಾರ್ಮಿಕ ಮತ್ತು ಸಾಮಾಜಿ–ಕ ಚಟುವಟಿಕೆಗಳ ಕುರಿತು ಸಹ ಆತ್ಮೀಯವಾಗಿ ವಿಚಾರ ವಿನಿಮಯ ನಡೆಯಿತು. ಸಮಾಜದಲ್ಲಿ ಜನರಲ್ಲಿ ಉತ್ತಮ ಚಿಂತನೆ, ಪರಸ್ಪರ ಗೌರವ ಮತ್ತು ಸಹಕಾರದ ಮನೋಭಾವ ಬೆಳೆಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ವಿವಿಧ ಕಾರ್ಯಗಳ ಬಗ್ಗೆಯೂ ಚರ್ಚಿಸಲಾಯಿತು.ಪೂಜ್ಯ ಸಿದ್ಧಬಸವ ಮಹಾಸ್ವಾಮಿಗಳ ಆಶೀರ್ವಾದ ಸ್ವೀಕರಿಸಿದ ಬಸನಗೌಡ ಬಾದರ್ಲಿ ಅವರು, ಜನಸೇವೆ ಮತ್ತು ಸಮಾಜದ ಹಿತವೇ ತಮ್ಮ ಪ್ರಮುಖ ಆದ–್ಯತೆಯಾಗಿದ್ದು, ಹಿರಿಯರು, ಮಠಾಧೀಶರು ಹಾಗೂ ಸಮಾಜದ ಗಣ್ಯರ ಮಾರ್ಗದರ್ಶನದೊಂದಿಗೆ ಜನಪರ ಕಾರ್ಯಗಳಿಗೆ ಮತ್ತಷ್ಟು ಒತ್ತು ನೀಡಲಾಗುವುದು ಎಂದು ಹೇಳಿದರು.ಈ ಆತ್ಮೀಯ ಭೇಟಿಯು ಪರಸ್ಪರ ಗೌರವ, ಆಶೀರ್ವಾದ ಮತ್ತು ಸಾಮಾಜಿಕ ಬದ್ಧತೆಯ ಸಂದೇಶವನ್ನು ಸಾರಿತು. ಪೂಜ್ಯ ಶ್ರೀಗಳ ಆಶೀರ್ವಾದ ಹಾಗೂ ಮಾರ್ಗದರ್ಶನ ಸದಾ ತಮ್ಮ ಹಾಗೂ ಸಮಾಜದ ಎಲ್ಲರಿಗೂ ಶಕ್ತಿ ಮತ್ತು ಪ್ರೇರಣೆಯಾಗಿರಲಿ ಎಂದು ಬಸನಗೌಡ ಬಾದರ್ಲಿ ಅವರು ಹಾರೈಸಿದರು.ಈ ಸಂದರ್ಭದಲ್ಲಿ ಮುಖಂಡರಾದ ಸಂಜಯ ಕುಮಾರ್ ಜೈನ, ಮರಿಸ್ವಾಮಿ, ಹುಸೇನ್ ಬಾಷಾ, ಭಕ್ತರು, ಅಭಿಮಾನಿಗಳು ಹಾಗೂ ಹಿತೈಷಿಗಳು ಉಪಸ್ಥಿತರಿದ್ದರು.

ಸುಡುಗಾಡು ಸಿದ್ಧರ ಕಾಲೋನಿಗೆ ಮೂಲಭೂತ ಸೌಕರ್ಯ ತುರ್ತಾಗಿ ಕಲ್ಪಿಸಲು ಅಲೆಮಾರಿ ಜಾಗೃತ ಸಂಘ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್



ಹಟ್ಟಿ ಚಿನ್ನದ ಗಣಿ ಸೆ.: ಪಾಮನಕಲ್ಲೂರು ಕ್ರಾಸ್ ಹತ್ತಿರ ಮೂವತ್ತು ವರ್ಷಗಳಿಂದ ವಾಸಿಸುತ್ತಿರುವ ಸುಡುಗಾಡು ಸಿದ್ಧರ ಕೇರಿಗೆ ಮೂಲಭೂತ ಸೌಕರ್ಯ ಒದಗಿಸಲು ಅಲೆಮಾರಿ ಜಾಗೃತ ಸಂಘದ ಅಧ್ಯಕ್ಷ ಬಸವರಾಜ ಹಟ್ಟಿ, ಉಪಾಧ್ಯಕ್ಷ ಗಂಗಾಧರ್ ಶಂಖು ನಿಯೋಗದ ವತಿಯಿಂದ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.ಮನವಿ ಪತ್ರ ಸ್ವೀಕ–ರಿಸಿದ ಪಂಚಾಯತ್ ಕರ ವಸೂಲಿ ಅಧಿಕಾರಿ ಅಕ್ರಮ್ ಅವರು ವಾರದೊಳಗೆ ಮೇಲಾಧಿಕಾ–ರಿಗಳ ಗಮನಕ್ಕೆ ತಂದು ಸಮಸ್ಯೆಗಳನ್ನು ಇತ್ಯಥ–್ಪಡಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ನಾವು ಹಟ್ಟಿ ಪಟ್ಟಣ ಪಂಚಾಯತ್ ವ್ಯಾಪ್ತಿಯ ಪಾಮನಕಲ್ಲೂರು ಕ್ರಾಸ್ ಹತ್ತಿರದ ಬಸವ ಜ್ಯೋತಿ ನಗರದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಅಲೆಮಾರಿ ಪಟ್ಟಿಯಲ್ಲಿ ಬರುವ ಸುಡುಗಾಡು ಸಿದ್ಧ ಜನಾಂಗದವರಾಗಿದ್ದು, ಸುಮಾರು ಮೂರು ದಶಕಗಳ ಕಾಲ ಇಲ್ಲಿಯ ನಿವಾಸಿಗಳಾಗಿದ್ದು, ಆಗಿನಿಂದಲೂ ನಮ್ಮ ಓಣಿಯಲ್ಲಿ ಹಲವು ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸಾರ್ವಜನಿಕ ಸಮಸ್ಯೆಗಳು ದೀರ್ಘಕಾಲದಿಂದ ಪಂಚಾಯತ್ ಆಡಳಿತದ ನಿರ್ಲಕ್ಷ್ಯ ಧೋರಣೆಯಿಂದ ಹಾಗೆಯೇ ಮುಂದುವರೆದಿವೆ. ಈ ಸಮಸ್ಯೆಗಳಿಂದ ಮಕ್ಕಳು, ಮಹಿಳೆಯರು, ವೃದ್ಧರು ಸೇರಿದಂತೆ ಎಲ್ಲಾ ನಿವಾಸಿಗಳು ದಿನನಿತ್ಯ ತೊಂದರೆ ಅನುಭವಿಸುವಂತಾಗಿದೆ. ಮುಖ್ಯಾಧಿಕಾರಿಗಳು ಈ ಮನವಿಯನ್ನು ತುರ್ತು ಸಾರ್ವಜನಿಕ ಸಮಸ್ಯೆಗಳ ಮನವಿಯಾಗಿ ಪರಿಗಣಿಸಿ, ಸ್ಥಳ ಪರಿಶೀಲನೆ ನಡೆಸಿ, ಒಂದು ವಾರದೊಳಗೆ ತುರ್ತು ಸಮಸ್ಯೆಗಳನ್ನು, ಮಿಕ್ಕ ಸಮಸ್ಯೆಗಳನ್ನು ಗರಿಷ್ಠ ಹದಿನೈದು ದಿನಗಳೊಳಗಾಗಿ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ನಿಯೋಗ ಒತ್ತಾಯಿಸಿತು.ಕುಡಿಯುವ ನೀರು, ಮಹಿಳಾ ಶೌಚಾಲಯ, ಚರಂಡಿ, ಗುಮ್ಮಿಯ ದುರಸ್ತಿ, ಸೊಳ್ಳೆ ನಿಯಂತ್ರಣ, ಬೀದಿ ದೀಪಗಳ ಕೊರತೆ, ರಸ್ತೆಗಂಟಿದ ಗಿಡಗಂಟಿಗಳ ತೆರವುಗೊಳಿಸುವಿಕೆ ಹೀಗೆ ಎಲ್ಲಾ ಸಮಸ್ಯೆಗಳು ನಮ್ಮ ಜನರ ದೈನಂದಿನ ಜೀವನ, ಸಾರ್ವಜನಿಕ ಆರೋಗ್ಯ, ಸ್ವಚ್ಛತೆ ಹಾಗೂ ಸುರಕ್ಷತೆಗೆ ನೇರವಾಗಿ ಸಂಬಂಧಿಸಿದ ಸಮಸ್ಯೆಗಳಾಗಿವೆ. ಆದ್ದರಿಂದ, ಮಾನ್ಯ ಮುಖ್ಯಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಬಸವ ಜ್ಯೋತಿ ನಗರಕ್ಕೆ ಸ್ಥಳ ಪರಿಶೀಲನೆ ನಡೆಸಿ, ಸಮಸ್ಯೆಗಳಿಗೆ ಆದ್ಯತೆಯ ಮೇರೆಗೆ ಅಗತ್ಯ ಕ್ರಮ ಕೈಗೊಂಡು, ಸಾಧ್ಯವಾದಷ್ಟು ಶೀಘ್ರವಾಗಿ ಪರಿಹಾರ ಕಲ್ಪಿಸಬೇಕು. ಇಲ್ಲದಿದ್ದಲ್ಲಿ, ಸಾರ್ವಜನಿಕರ ಹಕ್ಕುಗಳು ಮತ್ತು ಮೂಲಭೂತ ಸೌಕರ್ಯಗಳಿಗಾಗಿ ಕಾನೂನುಬದ್ಧ ಹಾಗೂ ಶಾಂತಿಯುತ ರೀತಿಯಲ್ಲಿ ಸಂಬಂಧಪಟ್ಟ ಮೇಲಾಧಿಕಾರಿಗಳ ಗಮನಕ್ಕೆ ವಿಷಯವನ್ನು ಕೊಂಡೊಯ್ಯುವುದು ಹಾಗೂ ಅಗತ್ಯಬಿದ್ದಲ್ಲಿ ಪಟ್ಟಣ ಪಂಚಾಯತ್ ಕಾರ್ಯಾಲಯದ ಮುಂದೆ ಬೃಹತ್ ಪ್ರತಿಭಟನೆ ನಡೆಸುವುದು ಅನಿವಾರ್ಯವಾಗುತ್ತದೆ. ವಾರದೊಳಗೆ ಈ ಮೇಲ್ಕಂಡ ಸಮಸ್ಯೆಗಳನ್ನು ಸಹಾನುಭೂತಿಯಿಂದ ತುರ್ತು ಕ್ರಮಕೈಗೊಳ್ಳದಿದ್ದಲ್ಲಿ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚ–ರಿಸಿದರು.ನಿಯೋಗದಲ್ಲಿ ನಿವಾಸಿಗಳಾದ ಮಲ್ಲಿಕಾರ್ಜುನ ಶಂಖು, ಈರೇಶ(ಚಿಟ್ಟಿ), ರವಿಕುಮಾರ್, ಗೋಪಾಲ, ಶೇಖರ್, ನಾಗಲಿಂಗ ಸೇರಿದಂತೆ ಇತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101